ಮೆಸ್ಕಾಂ
MESCOM

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಆಡಳಿತಕ್ಕೆ ಒಳಪಟ್ಟಿದೆ)

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪವಿಭಾಗ,
ಕಾರ್ಕಳ-574104

Ph : 08258-230648.
: 9448289501

ಕ್ರಮಾಂಕ: ಸಕಾನಿಇಂ(ವಿ)/ಕಾರ್ಕಳ/ಸ.ಇಂ(ತಾ)/ಎಫ್-29/2023-24/ 2646-52 ದಿನಾಂಕ: 09 AUG 2023

## ಜನಸಂಪರ್ಕ ಸಭಾ ನಡಾವಳಿ

ವೀಡಿಯೋ ಕಾನ್ಫರೆನ್ಸ್‌ನಲ್ಲಿ ಸಭೆಯಲ್ಲಿ ಹಾಜರಾಗಿದ್ದ ಅಧಿಕಾರಿಗಳು:-

1. ಶ್ರೀ ದಿನೇಶ್ ಉಪಾಧ್ಯಾಯ : ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ವೃತ್ತ ಕಛೇರಿ, ಉಡುಪಿ
2. ಶ್ರೀ.ನರಸಿಂಹ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಕಳ ವಿಭಾಗ
3. ಶ್ರೀ.ರಮೇಶ್ : ಮಾನ್ಯ ಉಪನಿಯಂತ್ರಣಾಧಿಕಾರಿ, ವೃತ್ತ ಕಛೇರಿ, ಉಡುಪಿ
4. ಶ್ರೀಮತಿ ಶಿಲ್ಪಾ ಎಸ್ ಶೆಟ್ಟಿ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಕಳ ಉಪವಿಭಾಗ
5. ಶ್ರೀ ವಿನಾಯಕ್ ಕಾಮತ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ನಿಟ್ಟೆ ಉಪವಿಭಾಗ
6. ಶ್ರೀ ಗಿರೀಶ್ : ಲೆಕ್ಕಾಧಿಕಾರಿ. ಆಂತರಿಕ ಲೆಕ್ಕ ಪರಿಶೋಧನ, ಕಾರ್ಕಳ ವಿಭಾಗ, ಮೆಸ್ಕಾಂ
7. ಶ್ರೀಮತಿ ಸಂಧ್ಯಾ : ಲೆಕ್ಕಾಧಿಕಾರಿ.(ಪ್ರ) ಕಾರ್ಕಳ ವಿಭಾಗ, ಮೆಸ್ಕಾಂ
8. ಶ್ರೀ.ಸಚಿನ್ ಆಚಾರ್ಯ : ಸಹಾಯಕ ಇಂಜಿನಿಯರ್(ತಾಂತ್ರಿಕ), ಕಾರ್ಕಳ
9. ಶ್ರೀ.ವಿನೋದ್ ಕುಮಾರ್ : ಸಹಾಯಕ ಇಂಜಿನಿಯರ್(ವಿ), ಬೈಲೂರು ಶಾಖೆ
10. ಶ್ರೀ.ನವೀನ್ ಹೆಚ್ : ಸಹಾಯಕ ಇಂಜಿನಿಯರ್(ವಿ), ಕಾರ್ಕಳ-ಬಿ ಶಾಖೆ
11. ಶ್ರೀವಸಂತ್ : ಕಿರಿಯ ಇಂಜಿನಿಯರ್(ವಿ), ಹೊಸ್ಮಾರು ಶಾಖೆ
12. ಶ್ರೀನಿತ್ಯಾನಂದ ತೆಂಡೂಲ್ಕರ್ : ಕಿರಿಯ ಇಂಜಿನಿಯರ್(ವಿ), ಬಜಗೋಳಿ ಶಾಖೆ
13. ಶ್ರೀ ರವಿಚಂದ್ರ : ಸಹಾಯಕ ಇಂಜಿನಿಯರ್(ವಿ)(ಪ್ರ), ಕಾರ್ಕಳ-ಎ ಶಾಖೆ
14. ಶ್ರೀ ಮಧುಕುಮಾರ್ ಎ : ಕಿರಿಯ ಇಂಜಿನಿಯರ್(ವಿ), ಸಾಣೂರು ಶಾಖೆ
15. ಶ್ರೀಮತಿ ಉಮಾ ಸಿ ಆರ್ : ಸಹಾಯಕ ಲೆಕ್ಕಾಧಿಕಾರಿ ಕಾರ್ಕಳ ಉಪವಿಭಾಗ

ದಿನಾಂಕ:18.07.2023ರಂದು ಸಮಯ ಬೆಳಿಗ್ಗೆ 10:30 ಗಂಟೆಗೆ ಕಾರ್ಕಳ ಉಪವಿಭಾಗ ಕಛೇರಿಯ ಜನಸಂಪರ್ಕ ಸಭೆಯನ್ನು ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ವೃತ್ತ ಕಛೇರಿ, ಉಡುಪಿ, ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಮಾನ್ಯ ಉಪನಿಯಂತ್ರಣಾಧಿಕಾರಿ, ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾರ್ಕಳ ವಿಭಾಗ ಹಾಗೂ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾರ್ಕಳ ಮತ್ತು ನಿಟ್ಟೆ ಉಪವಿಭಾಗ, ಲೆಕ್ಕಾಧಿಕಾರಿ ಕಾರ್ಕಳ ವಿಭಾಗ ಇವರು ಭಾಗವಹಿಸಿದ್ದರು. ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾರ್ಕಳ ಉಪವಿಭಾಗ ಇವರು ಸಭೆಯಲ್ಲಿದ್ದ ಎಲ್ಲರನ್ನೂ ಸ್ವಾಗತಿಸಿದರು.

ಸ್ವೀಕರಿಸಿದ ಅಹವಾಲುಗಳು:

1. ಶ್ರೀ ಯಶ್ವಂತ ಶೆಣೈ ಸಾಲ್ಮರ ಕಾರ್ಕಳ ಇವರು ಮಾಪಕದ ದಿನಾಂಕ ಪ್ರತಿ ತಿಂಗಳ 10 ಆಗಿದ್ದು ಜೂನ್-2023 ತಿಂಗಳ ಬಿಲ್ಲನ್ನು 15 ನೇ ತಾರೀಕಿನಂದು ನೀಡಿದ್ದು ಬಿಲ್ಲು ಅಧಿಕ ಬಂದಿರುವುದಾಗಿ ತಿಳಿಸಿದರು.

   ಸದರಿಯವರಿಗೆ ಕಂದಾಯ ಶಾಖೆಯಿಂದ ಪರಿಷ್ಕರಿಸಿದ ಬಿಲ್ಲನ್ನು ನೀಡಲಾಯಿತು.

2. ಶ್ರೀ ಆರ್ ಸುಕ್ಷಿತ್ ಜೈನ್, ಕೃಷಿ ಕಿಸಾನ್ ರಕ್ಷಣಾ ಸಂಘ(ರಿ) ರೆಂಜಾಳ ಉಡುಪಿ ಇವರು ರೆಂಜಾಳ ಗ್ರಾಮದ ಹಳೆ ವಿದ್ಯುತ್ ವಾಹಕವನ್ನು ಹಾಗೂ ಜೋತು ಬಿದ್ದಿರುವ ವಾಹಕವನ್ನು ಸರಿಪಡಿಸುವುದು ಹಾಗೂ ಮಧ್ಯಂತರ ಕಂಬಗಳನ್ನು ಅಳವಡಿಸಬೇಕಾಗಿ ಕೋರಿರುತ್ತಾರೆ.

ಸದರಿಯವರ ದೂರು ಸಾಣೂರು ಶಾಖಾ ವ್ಯಾಪ್ತಿಗೆ ಬರುವುದರಿಂದ ದೂರನ್ನು ನಿಟ್ಟೆ ಉಪವಿಭಾಗಕ್ಕೆ ಹಸ್ತಾಂತರಿಸಲಾಯಿತು.



SP | RP | C | OP | H
Mode No: 49484
E Office No:
14/08/23

3. ಶ್ರೀ ಕೆ ಸದಾನಂದ ಆಚಾರ್ಯ ಕಾರ್ಕಳ ಇವರು ಬಿಲ್ಲು ತಡವಾಗಿ ಬಂದಿರುವುದಾಗಿ ತಿಳಿಸಿದರು ಹಾಗೂ ಕಾಬೆಟ್ಟು ಬ್ರಿಡ್ಜ್ ಬಳಿಯ ಲೈನ್‌ಗೆ ತಾಗುವ ಗಿಡಮರಗಳನ್ನು ತೆರವುಗೊಳಿಸಬೇಕಾಗಿ ಕೋರಿದರು.

ಕಾರ್ಕಳ–ಎ ಶಾಖೆಯ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲು ಸಭೆಯಲ್ಲಿ ಸೂಚಿಸಲಾಯಿತು.

4. ಶ್ರೀ ಕೆ ವಸಂತ ಭಟ್ ಎಸ್ ಬಿ ಯಂ ಬ್ಯಾಂಕ್ ಬಳಿ ಸಾಲ್ಮರ ಕಾರ್ಕಳ ಸದರಿಯವರ ಆರ್ ಆರ್ ಸಂಖ್ಯೆ: 114844 ಆಗಿದ್ದು ಸದರಿ ಸ್ಥಾವರದ ಹೆಸರು ಬದಲಾವಣೆ ಮಾಡಲು ಸಲ್ಲಿಸಬೇಕಾದ ದಾಖಲೆಗಳ ವಿವರವನ್ನು ಕೇಳಿದರು.

ಸದರಿಯವರಿಗೆ ಸಹಾಯಕ ಲೆಕ್ಕಾಧಿಕಾರಿ ಕಾರ್ಕಳ ಉಪವಿಭಾಗ ಇವರು ಹೆಸರು ಬದಲಾವಣೆಗೆ ಬೇಕಾಗುವ ದಾಖಲೆಯ ಬಗ್ಗೆ ಸಭೆಯಲ್ಲಿ ಮಾಹಿತಿ ನೀಡಿದರು.

5. ಶ್ರೀ ಅನಿಲ್ ಎಸ್ ಪೂಜಾರಿ ದೇರೊಟ್ಟು ಮಂಜಲ್ತಾರ್ ಅಂಚೆ ಮಾಳ ಗ್ರಾಮ ಸದರಿಯವರು ಮಾಳ ಮಠ ಪರಿವರ್ತಕದಿಂದ ಹಾಗೂ ನೀರಾವರಿ ಪಂಪ್ ಸೆಟ್ಟ್‌ಗಳಿಗೆ ಹಾದೂ ಹೋದ ಎಲ್.ಟಿ ಲೈನ್ ವಾಹಕವನ್ನು ಬದಲಾಯಿಸಲು ಕೋರಿದರು.

ಹೊಸ್ಮಾರು ಶಾಖಾ ವ್ಯಾಪ್ತಿಯಲ್ಲಿ ಬರುವ ಮಾಳ ಮಠ ಪರಿವರ್ತಕದ ವಾಹಕ ಬದಲಾವಣೆಯ ಅಂದಾಜುಪಟ್ಟಿಯನ್ನು ಈಗಾಗಲೇ ತಯಾರಿಸಿದ್ದು ಶೀಘ್ರದಲ್ಲಿ ವಾಹಕ ಬದಲಾವಣೆಯ ಬಗ್ಗೆ ಸದರಿಯವರಿಗೆ ವಿವರವನ್ನು ನೀಡಲಾಯಿತು.

6. ಶ್ರೀ ಪ್ರಕಾಶ್ ರಾವ್ ಕಾಳಿಕಾಂಬ ರಸ್ತೆ ಕಾರ್ಕಳ ಇವರು ಹಳೆ ವಾಹಕವನ್ನು ಬದಲಾಯಿಸುವ ಬಗ್ಗೆ ಹಾಗೂ ಚತುರ್ಮುಖ ಬಸದಿ ಹತ್ತಿರ ಹಾದೂ ಹೋದ ಲೈನ್‌ಗೆ ಮಧ್ಯಂತರ ಕಂಬ ಅಳವಡಿಸುವ ಬಗ್ಗೆ ಕೋರಿದರು.

ಕಾರ್ಕಳ–ಎ ಶಾಖೆಯ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ ಮುಂದಿನ ಯಾಕ್ಷನ್ ಪ್ಲಾನ್‌ನಲ್ಲಿ ಸೇರಿಸಲು ಕ್ರಮ ಕೈಗೊಳ್ಳಲು ಸಭೆಯಲ್ಲಿ ಸೂಚಿಸಲಾಯಿತು.

ಜನಸಂಪರ್ಕ ಸಭೆಗೆ ಬಂದ ಎಲ್ಲಾ ಗ್ರಾಹಕರಿಗೂ ಲಘು ಉಪಹಾರ ನೀಡಿ ಎಲ್ಲಾ ಅಹವಾಲುಗಳನ್ನು ಆಲಿಸಿ ಸೂಕ್ತ ರೀತಿಯಲ್ಲಿ ಮಂಡಿಸಲಾಯಿತು. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಕಳ ಉಪವಿಭಾಗ ಇವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ ವರ್ಗ ಮತ್ತು ಗ್ರಾಹಕರಿಗೆ ಧನ್ಯವಾದಗಳನ್ನು ಸಮರ್ಪಿಸುವ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ

(ಶ್ರೀ... ಎಸ್ ಶೆಟ್ಟಿ)
ಸಹಾಯಕ ಕಾರ್ಯನಿರ್ವಾಹಕಇಂಜಿನಿಯರ್(ವಿ)
ಮೆಸ್ಕಾಂ ನಿಯಮಿತ, ಕಾರ್ಕಳ ಉಪವಿಭಾಗ

ಪ್ರತಿ:- 1. ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಪಾಲನೆ ಮತ್ತು ನಿರ್ವಹಣೆ ವೃತ್ತ, ಎಂ.ಜಿ.ಎಂ.ಗ್ರೌಂಡ್ ಹತ್ತಿರ, ಮಂ.ವಿ.ಸ.ಕಂ. ಕುಂಜಿಬೆಟ್ಟು ಉಡುಪಿ – 576 102, ದಯಾಪರರ ಅವಗಾಹನೆಗಾಗಿ

2. ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮೆಸ್ಕಾಂ(ನಿ), ವಿಭಾಗೀಯ ಕಚೇರಿ, ಕಾರ್ಕಳ, ದಯಾಪರರ ಅವಗಾಹನೆಗೆ

3. ಎಲ್ಲಾ ಶಾಖಾಧಿಕಾರಿಗಳು ಮೆಸ್ಕಾಂ(ನಿ), ಕಾರ್ಕಳ ಉಪವಿಭಾಗ,

P

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ

(ಆಡಳಿತ ಕಛೇರಿ ಕಾವೂರು ಕ್ರಾಸ್ ರಸ್ತೆ, ಬಿಜೈ ಮಂಗಳೂರು-575001)

(CIN U40109 KA 2002 SGC 030425 ವೆಬ್ ಸೈಟ್ ವಿಳಾಸ. www mesco.in)

(ಕರ್ನಾಟಕ ಸರಕಾರದ ಆಡಳಿತಕ್ಕೆ ಒಳಪಟ್ಟಿದೆ)


ಮೆಸ್ಕಾಂ MESCOM

ಸಹಾಯಕಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪವಿಭಾಗ ,
"ಸನ್ಮಾನ್ ರೆಜೆನ್ಸಿ" ಲೆಮಿನಾ ಕ್ರಾಸ್
ನಿಟ್ಟೆ-574110

Ph : 08258-200890.
Email: aeemescomnitte@ gmail.com


ದಿನಾಂಕ: 19 AUG 2023

ಕ್ರಮಾಂಕ: ಸಕಾನಿಇಂ(ವಿ)/ನಿಟ್ಟೆ /ಸ.ಇಂ(ತಾ)/2023-24/2391-96

ದಿನಾಂಕ: 19.08.2023 ರಂದು ನಿಟ್ಟೆ ಉಪವಿಭಾಗದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು:-

ಜನಸಂಪರ್ಕ ಸಭೆಯಲ್ಲಿ ಹಾಜರಾಗಿದ್ದ ಅಧಿಕಾರಿಗಳು/ನೌಕರರು:-

1. ಶ್ರೀ.ಪಿ.ದಿನೇಶ್ ಉಪಾಧ್ಯಾಯ : ಅಧೀಕ್ಷಕ ಇಂಜಿನೀಯರ್(ವಿ), ಪಾಲನೆ ಮತ್ತು ನಿರ್ವಹಣೆ ವೃತ್ತ, ಉಡುಪಿ
2. ಶ್ರೀ.ರಮೇಶ್ : ಉಪಲೆಕ್ಕ ನಿಯಂತ್ರಣಾಧಿಕಾರಿ, ಪಾಲನೆ ಮತ್ತು ನಿರ್ವಹಣೆ ವೃತ್ತ, ಉಡುಪಿ
3. ಶ್ರೀ.ನರಸಿಂಹ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಕಳ ವಿಭಾಗ
4. ಶ್ರೀ. ವಿನಾಯಕ. ಕೆ. ಕಾಮತ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಿಟ್ಟೆ ಉಪವಿಭಾಗ.
5. ಶ್ರೀ.ಹರಿಪ್ರಸಾದ್ : ಸಹಾಯಕ ಇಂಜಿನಿಯರ್(ತಾಂತ್ರಿಕ), ನಿಟ್ಟೆ ಉಪವಿಭಾಗ
6. ಶ್ರೀಮತಿ ಆಶಾ : ಸಹಾಯಕ ಲೆಕ್ಕಾಧಿಕಾರಿ(ಪ್ರ), ನಿಟ್ಟೆ ಉಪವಿಭಾಗ
7. ಶ್ರೀ.ಸುಧೀಂದ್ರ : ಸಹಾಯಕ ಇಂಜಿನಿಯರ್, ನಿಟ್ಟೆ ಶಾಖೆ
8. ಶ್ರೀ.ಪ್ರದೀಪ್ : ಕಿರಿಯ ಇಂಜಿನಿಯರ್, ಬೆಳ್ಮಣ್ ಶಾಖೆ
9. ಶ್ರೀ. ಸೋಮಯ್ಯ ಪೂಜಾರಿ : ಕಿರಿಯ ಇಂಜಿನಿಯರ್, ಮುಂಡ್ಕೂರು ಶಾಖೆ & ಸಾಣೂರು ಶಾಖೆ.
10. ಶ್ರೀ.ಮಧುಕುಮಾರ್ : ಓವರ್‌ಸಿಯರ್, ಸಾಣೂರು ಶಾಖೆ

ಜನಸಂಪರ್ಕ ಸಭೆಯಲ್ಲಿ ಹಾಜರಿದ್ದ ಗ್ರಾಹಕರು :

1. ಶ್ರೀ. ದಯಾನಂದ. ಮಿಯ್ಯಾರು ಗ್ರಾಮ. ಮೊಬೈಲ್ ನಂಬರ್: 9880163680
2. ಶ್ರೀಮತಿ ಸರಸ್ವತಿ ಕಾಮತ್, ಬೋರ್ಗಲ್‌ಗುಡ್ಡೆ, ನಿಟ್ಟೆ ಗ್ರಾಮ, ಮೊಬೈಲ್ ನಂ.:8088219523

ಅಧೀಕ್ಷಕ ಇಂಜಿನೀಯರ್(ವಿ), ಪಾಲನೆ ಮತ್ತು ನಿರ್ವಹಣೆ ವೃತ್ತ, ಉಡುಪಿ ಇವರು ಸಭೆಯಲ್ಲಿ ಹಾಜರಾಗಿದ್ದ ಅಧಿಕಾರಿ/ನೌಕರರು/ ಗ್ರಾಹಕರನ್ನು ಸ್ವಾಗತಿಸಿ ಜನಸಂಪರ್ಕ ಸಭೆ ನಡೆಸಿದರು.

1. ಶ್ರೀ. ದಯಾನಂದ, ಮಿಯ್ಯಾರು ಗ್ರಾಮ ಇವರ ಮನೆಯ ವಿದ್ಯುತ್ ಸಂಪರ್ಕ ಆರ್.ಆರ್.ನಂ:112401 ರಲ್ಲಿ 2022-23ರ ಸಾಲಿನಲ್ಲಿ ದೋಷಪೂರಿತ ಮಾಪಕದಿಂದಾಗಿ ಬಳಕೆ ಪ್ರಮಾಣದಲ್ಲಿ ಗಣನೀಯವಾಗಿ ಏರಿಕೆಯಾಗಿದ್ದು, ಮೆಸ್ಕಾಂನ ಪ್ರಯೋಗಾಲಯದಲ್ಲಿ ಮೀಟರ್ ದೋಷಪೂರಿತವೆಂದು ವರದಿ ಬಂದಿದ್ದು ನಂತರದಲ್ಲಿ ವಿದ್ಯುತ್ ಮೊತ್ತದ ವ್ಯತ್ಯಾಸವನ್ನು ಸರಿಪಡಿಸಲಾಗಿದ್ದರೂ ದೋಷಪೂರಿತ ವಿದ್ಯುತ್ ಬಳಕೆ ಪ್ರಮಾಣವನ್ನು ಪರಿಷ್ಕರಿಸಿರುವುದಿಲ್ಲ. ಇದರಿಂದಾಗಿ ಗೃಹಜ್ಯೋತಿ ಯೋಜನೆಯ ಉಚಿತ ವಿದ್ಯುತ್ ಬಳಕೆ ಪ್ರಮಾಣದಿಂದ ವಂಚಿತನಾಗಿದ್ದು ನ್ಯಾಯದೊರಕಿಸಿಕೊಡುವಂತೆ ಕೋರಿಕೊಂಡರು. ಈ ಬಗ್ಗೆ ಕ್ರಮಕೈಗೊಂಡಿದ್ದು ತಂತ್ರಾಂಶದಲ್ಲಿನ ವಿದ್ಯುತ್ ಬಳಕೆ ಪ್ರಮಾಣ ಪರಿಷ್ಕರಣೆ ಕಾರ್ಪೋರೇಟ್ ಕಛೇರಿಯಿಂದ ಆಗಬೇಕಾಗಿರುವುದರಿಂದ ಈ ಬಗ್ಗೆ ಈಗಾಗಲೇ ಪತ್ರವನ್ನು ಬರೆಯಲಾಗಿದೆ ಎಂದು ತಿಳಿಸಲಾಯಿತು.
2. ಶ್ರೀಮತಿ ಸರಸ್ವತಿ ಕಾಮತ್, ಬೋರ್ಗಲ್‌ಗುಡ್ಡೆ, ನಿಟ್ಟೆ ಗ್ರಾಮ ಇವರು ತಮ್ಮ ಮನೆಯ ವಿದ್ಯುತ್ ಸಂಪರ್ಕ ಆರ್.ಆರ್.ನಂ:8423 ಮೀಟರ್ ಹಾಳಾಗಿದ್ದು ಬದಲಾಯಿಸಿಕೊಡುವಂತೆ ಕೋರಿದರು. ಸದರಿ ದೋಷಪೂರಿತ ಮೀಟರನ್ನು ಬದಲಾಯಿಸುವಂತೆ ನಿಟ್ಟೆ ಶಾಖಾಧಿಕಾರಿಯವರಿಗೆ ತಿಳಿಸಲಾಯಿತು.

ಇನ್ನಾವುದೇ ದೂರುಗಳು ಬರದೇ ಇದ್ದ ನಿಮಿತ್ತ ಕಂದಾಯ/ ತಾಂತ್ರಿಕ ವಿಷಯಗಳ ಬಗ್ಗೆ ಪ್ರಗತಿ ಪರಿಶೀಲನಾ ಸಭೆ ಜರುಗಿತು.

ಅಂತ್ಯದಲ್ಲಿ ಧನ್ಯವಾದಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

19/8/23

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಮೆಸ್ಕಾಂ ನಿಯಮಿತ, ನಿಟ್ಟೆ ಉಪವಿಭಾಗ

- ಪ್ರತಿಯನ್ನು ಗೌರವಪೂರ್ವಕವಾಗಿ ಈ ಕೆಳಗಿನವರ ಅವಗಾಹನೆಗೆ ಸಲ್ಲಿಸಿದೆ.
  1. ಅಧೀಕ್ಷಕ ಇಂಜಿನೀಯರ್(ವಿ), ಪಾಲನೆ ಮತ್ತು ನಿರ್ವಹಣೆ ವೃತ್ತ, ಮವಿಸಕಂ, ಎಂ.ಜಿ.ಎಂ ಮೈದಾನದ ಎದುರು, ಕುಂಜಿಬೆಟ್ಟು, ಉಡುಪಿ-576102
  2. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಮೆಸ್ಕಾಂ, ಕಾರ್ಕಳ.
- ಪ್ರತಿ:
  3. ಶಾಖಾಧಿಕಾರಿ, ಕಾರ್ಯ ಮತ್ತು ಪಾಲನಾ ಶಾಖೆ, ನಿಟ್ಟೆ /ಬೆಳ್ಮಣ್ / ಮುಂಡ್ಕೂರು /ಸಾಣೂರು. ಅನುಸರಣೆಗಾಗಿ
  4. ಕಛೇರಿ ಪ್ರತಿ




Mode No:
E Office No: 510520.
Scan:
No. of Pages:

**ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ**
*(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)*

ನೋಂದಾಯಿತ ಕಛೇರಿ: ಕಾರ್ಪೋರೇಟ್ ಕಛೇರಿ,
"ಮೆಸ್ಕಾಂ ಭವನ" ಕಾವೂರು ಅಡ್ಡರಸ್ತೆ,
ಬಿಜೈ, ಮಂಗಳೂರು-575004
CIN:U40109 KA 2002 SGC 030425
ವೆಬ್‌ಸೈಟ್: www.mesco.in

MESCOM

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪವಿಭಾಗ,
ಶಂಕರನಾರಾಯಣ-576227
Email:aeemescomshn@gmail.com
Phone: 08259 280300

ಕ್ರಮಾಂಕ: ಸ.ಕಾ.ನಿ.ಇಂ(ವಿ)/ಶಂ/ಸ.ಇಂ(ತಾಂ)/2023-24/ 2749-55 ದಿನಾಂಕ: 17/07/2023

ದಿನಾಂಕ 12.07.2023 ರಂದು ಬೆಳಿಗ್ಗೆ 10.30 ಗಂಟೆಗೆ ಶಂಕರನಾರಾಯಣ ಕಾರ್ಯ ಮತ್ತು ಪಾಲನಾ ಉಪವಿಭಾಗ ಕಛೇರಿಯಲ್ಲಿ ಜರುಗಿದ ಜನಸಂಪರ್ಕ ಸಭೆಯ ನಡಾವಳಿಗಳು

<u>ಅಧ್ಯಕ್ಷತೆ :</u> ಶ್ರೀ ಪಿ. ದಿನೇಶ್ ಉಪಾಧ್ಯ, ಅಧೀಕ್ಷಕ ಇಂಜಿನಿಯರ್(ವಿ), ಪಾಲನೆ ಮತ್ತು ನಿರ್ವಹಣೆ ವೃತ್ತ, ಉಡುಪಿ

<u>ಉಪಸ್ಥಿತಿ:</u> 1) ಶ್ರೀ ರಮೇಶ್, ಉಪ ಲೆಕ್ಕನಿಯಂತ್ರಣಾಧಿಕಾರಿ, ಉಡುಪಿ ವೃತ್ತ
2) ಶ್ರೀ ರಾಕೇಶ್.ಬಿ, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಕುಂದಾಪುರ

<u>ಹಾಜರಿದ್ದ ಅಧಿಕಾರಿಗಳು :</u>

1) ಶ್ರೀ ಪ್ರವೀಣ ಆಚಾರಿ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) (ಪ್ರಭಾರ), ಶಂಕರನಾರಾಯಣ
2) ಶ್ರೀಮತಿ ಜ್ಯೋತಿ : ಸಹಾಯಕ ಇಂಜಿನಿಯರ್(ತಾಂ), ಶಂಕರನಾರಾಯಣ
3) ಶ್ರೀ ವಿಜಯ : ಹಿರಿಯ ಸಹಾಯಕರು, ಶಂಕರನಾರಾಯಣ
4) ಶ್ರೀ ಮಂಜುನಾಥ ಶ್ಯಾನುಭೋಗ್ : ಶಾಖಾಧಿಕಾರಿ, ಹಾಲಾಡಿ
5) ಶ್ರೀ ರಾಜೇಶ್.ಎಸ್ : ಶಾಖಾಧಿಕಾರಿ, ಅಂಪಾರು
6) ಶ್ರೀ ಕೃಷ್ಣ ಯಲ್ಲಾರಿ ಬೊಬಾಟಿ : ಶಾಖಾಧಿಕಾರಿ, ಸಿದ್ದಾಪುರ
9) ಶ್ರೀ ಉಮೇಶ್ ದೇವಾಡಿಗ : ಶಾಖಾಧಿಕಾರಿ, ಬೆಳ್ವೆ

<u>ಸಭೆಯಲ್ಲಿ ಹಾಜರಿದ್ದವರು :</u>

1) ಶ್ರೀ ರಾಜೇಶ ಹೆಬ್ಬಾರ್, ಅಧ್ಯಕ್ಷರು ಗ್ರಾಮ ಪಂಚಾಯತ್ ಉಳ್ಳೂರು-74
2) ಶ್ರೀ ಬಿ.ಕೆ ಶ್ರೀನಿವಾಸ ಸೌಡ, ಶಂಕರನಾರಾಯಣ
3) ಶ್ರೀ ಮಂಜುನಾಥ ಕುಲಾಲ, ಶಂಕರನಾರಾಯಣ
4) ಶ್ರೀ ರಘುರಾಮ
5) ಶ್ರೀ ಸೀತಾರಾಮ ಶೆಟ್ಟಿ
6) ಶ್ರೀ ನರಸಿಂಹ ನಾಯ್ಕ
7) ಶ್ರೀ ಜಯರಾಮ ನಾಯ್ಕ
8) ಶ್ರೀ ಮಹೇಶ್ ನಾಯ್ಕ
9) ಶ್ರೀ ಶರತ್ ನಾಯ್ಕ
10) ಶ್ರೀ ಮಂಜುನಾಥ ನಾಯ್ಕ
11) ಶ್ರೀ ಪ್ರಸಾದ್ ಶೆಟ್ಟಿ
12) ಶ್ರೀ ಪ್ರತಾಪ್ ನಾಯ್ಕ

SP | EP | C | CF | B
Mode No.: 476357
E Office No.:
Scan: 21/07/23
No. of Pages:

ಸಭೆಯ ಅಧ್ಯಕ್ಷತೆಯನ್ನು ಪಿ. ದಿನೇಶ್ ಉಪಾಧ್ಯ, ಅಧೀಕ್ಷಕ ಇಂಜಿನಿಯರ್(ವಿ), ಪಾಲನೆ ಮತ್ತು ನಿರ್ವಹಣೆ ವೃತ್ತ, ಉಡುಪಿರವರು ವಹಿಸಿದ್ದರು. ಸಭೆಗೆ ಆಗಮಿಸಿರುವ ಗಣ್ಯರು ಹಾಗೂ ಗೌರವಾನ್ವಿತ ಜನಪ್ರತಿನಿಧಿಗಳು ಹಾಗೂ ಗ್ರಾಹಕರನ್ನು ಶ್ರೀ ಪ್ರವೀಣ ಆಚಾರಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) (ಪ್ರಭಾರ), ಶಂಕರನಾರಾಯಣರವರು ಸಭೆಗೆ ಸ್ವಾಗತಿಸಿದರು.

ಈ ಕೆಳಕಂಡ ಮನವಿಗಳನ್ನು ಸಭೆಯಲ್ಲಿ ಸ್ವೀಕರಿಸಲಾಯಿತು.

1) ಮಚ್ಚಟ್ಟು ಗ್ರಾಮದ ಮೈಕಾಳ ಎಂಬಲ್ಲಿ ಎಲ್.ಟಿ ಸಿಂಗಲ್ ಫೇಸ್ 2 ತಂತಿ ಮಾರ್ಗವು ಹಾದು ಹೋಗಿದ್ದು, ಲೋವೋಲ್ಟೇಜ್ ಸಮಸ್ಯೆ ಆಗುತ್ತಿರುವುದರಿಂದ ಸದರಿ ಎಲ್.ಟಿ ಮಾರ್ಗವನ್ನು 3 ಫೇಸ್ 4 ತಂತಿ ಮಾರ್ಗಕ್ಕೆ ಪರಿವರ್ತನೆ ಮಾಡುವಂತೆ ಹಾಗೂ ಮೈಕಾಳ ಎಂಬಲ್ಲಿ ಶ್ರೀ ಅಣ್ಣಪ್ಪ ನಾಯ್ಕ ರವರ ತೋಟದ ಮಧ್ಯದಲ್ಲಿರುವ ಒಂದು ಕಂಬವು ವಾಲಿದ ಸ್ಥಿತಿಯಲ್ಲಿದ್ದು, ಸದರಿ ಕಂಬವನ್ನು ಬದಲಾಯಿಸುವಂತೆ ಶ್ರೀ ರಘುರಾಮ ರವರು ಮನವಿ ಮಾಡಿದರು. ಈ ಬಗ್ಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿ ಹಾಲಾಡಿರವರಿಗೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು.

2) ಅಮಾಸೆಬೈಲು ಗ್ರಾಮದ ಜಡ್ಡಿನಗದ್ದೆಯ ನಡುಪಾಲು, ಹೂಮನೆ, ಮೇಲುಮನೆ, ಕ್ಯಾದಿಗೆಕೊಡ್ಲು, ತಿಮ್ಮಜೆಡ್ಡು, ಸುಬ್ಬಣ್ಣಜೆಡ್ಡು, ದೊಡ್ಡಹಕ್ಲು ಎಂಬಲ್ಲಿ ಪರಿಶಿಷ್ಟ ಪಂಗಡ ಕಾಲೋನಿಯಲ್ಲಿ ಲೋವೋಲ್ಟೇಜ್ ಸಮಸ್ಯೆ ಇದ್ದು, ಇದರಿಂದ ತೊಂದರೆಯಾಗುತ್ತಿದ್ದು ಹೊಸ ಪರಿವರ್ತಕ ಅಳವಡಿಸುವಂತೆ ಅಲ್ಲಿನ ಗ್ರಾಹಕರು ಮನವಿ ಮಾಡಿದರು. ಈ ಬಗ್ಗೆ ಸ್ಥಳ ಪರಿಶೀಲಿಸಿ ಗಿರಿಜನ ಉಪಯೋಜನೆಯಡಿಯಲ್ಲಿ ಹೆಚ್ಚುವರಿ ಪರಿವರ್ತಕ ಅಳವಡಿಸಲು ಅಂದಾಜುಪಟ್ಟಿ ತಯಾರಿಸಿ ಸಲ್ಲಿಸುವಂತೆ ಶಾಖಾಧಿಕಾರಿ ಹಾಲಾಡಿ ರವರಿಗೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು.

3) ಉಳ್ಳೂರು ಪೇಟೆ 63 ಕೆ.ವಿ.ಎ ಪರಿವರ್ತಕದ ಎಲ್.ಟಿ ಮಾರ್ಗದ ವಾಹಕಗಳು ಶಿಥಿಲಗೊಂಡಿದ್ದು, ಬದಲಾಯಿಸುವಂತೆ ಶ್ರೀ ರಾಜೇಶ ಹೆಬ್ಬಾರ್ ರವರು ತಿಳಿಸಿದರು ರವರು ಮನವಿ ಮಾಡಿದರು. ಈ ಬಗ್ಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿ ಸಿದ್ಧಾಪುರರವರಿಗೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು.

4) ಉಳ್ಳೂರು-74 ಗ್ರಾಮದ ಗಾಣದಜೆಡ್ಡು ಬಳಿ ಪರಿಶಿಷ್ಟ ಪಂಗಡ/ಜಾತಿಯವರ ಕುಂಟುಂಬವಿದ್ದು, ಆ ಪರಿಸರದಲ್ಲಿ ಕೃಷಿ ಪಂಪುಸೆಟ್ಟು ಸ್ಥಾವರಗಳಿಗೆ ಲೋವೋಲ್ಟೇಜ್ ಸಮಸ್ಯೆ ಇದ್ದು, ಹೊಸ ಪರಿವರ್ತಕ ಅಳವಡಿಸುವಂತೆ ಶ್ರೀ ರಾಜೇಶ ಹೆಬ್ಬಾರ್ ಕೋರಿದರು. ಈ ಬಗ್ಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿ ಸಿದ್ಧಾಪುರ ರವರಿಗೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು.

5) ಉಳ್ಳೂರು-74 ಗ್ರಾಮದ ಹಾಡಿಮನೆ ಹತ್ತಿರ ಹೆಚ್.ಟಿ ವಿದ್ಯುತ್ ಮಾರ್ಗವು ತುಂಬಾ ಕೆಳಗೆ ಬಂದಿದ್ದು, ಅಪಾಯಕಾರಿ ಸ್ಥಿತಿಯಲ್ಲಿರುತ್ತದೆ ಎಂದು ರಾಜೇಶ ಹೆಬ್ಬಾರ್ ರವರು ತಿಳಿಸಿದರು. ಈ ಬಗ್ಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿ ಸಿದ್ಧಾಪುರ ರವರಿಗೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು.

ಸಭೆಗೆ ಆಗಮಿಸಿದ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸುತ್ತಾ ಸಭೆಯು ಮುಕ್ತಾಯಗೊಂಡಿತು.

(ಪ್ರವೀಣ ಆಚಾರಿ)
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಮ.ವಿ.ಸ.ಕಂ.ನಿ, ಶಂಕರನಾರಾಯಣ

ಪ್ರತಿ :

1) ಅಧೀಕ್ಷಕ ಇಂಜಿನಿಯರ್(ವಿ), ಪಾಲನೆ ಮತ್ತು ನಿರ್ವಹಣೆ ವೃತ್ತ, ಮ.ವಿ.ಸ.ಕಂ.ನಿ ಉಡುಪಿ ರವರ ದಯಾಪರ ಮಾಹಿತಿಗಾಗಿ
2) ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನಾ ವಿಭಾಗ ಮ.ವಿ.ಸ.ಕಂ.ನಿ ಕುಂದಾಪುರ ರವರ ದಯಾಪರ ಮಾಹಿತಿಗಾಗಿ
3) ಶಾಖಾಧಿಕಾರಿ, ಮ.ವಿ.ಸ.ಕಂ.ನಿ, ಸಿದ್ಧಾಪುರ/ಹಾಲಾಡಿ/ಹೊಸಂಗಡಿ/ಅಂಪಾರು/ಬೆಳ್ವೆ ರವರ ಮಾಹಿತಿಗಾಗಿ

ಮೆಸ್ಕಾಂ
MESCOM

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ

(ಆಡಳಿತ ಕಛೇರಿ ಮವಿಸಕಂ,ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಬಳಿ ಕಾವೂರು ಕ್ರಾಸ್ ರಸ್ತೆ, ಬಿಜೈ ಮಂಗಳೂರು-575001)
ವೆಬ್ ಸೈಟ್ ವಿಳಾಸ. www mesco.in)
(CIN U40109 KA 2002 SGC 030425
(ಕರ್ನಾಟಕ ಸರಕಾರದ ಆಡಳಿತಕ್ಕೆ ಒಳಪಟ್ಟಿದೆ)

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ).,
ಕಾರ್ಯ ಮತ್ತು ಪಾಲನಾ ಉಪ ವಿಭಾಗ,
ತಲ್ಲೂರು .

ದೂರವಾಣಿ ಸಂಖ್ಯೆ : 08254-238028
ಇಮೇಲ್ : aeetallur@gmail.com

P.

ಕ್ರ.ಸಂ.:ಸಕಾನಿಇಂ(ವಿ)/ಹಿ.ಸ/ಟಿ.ಎಲ್.ಆರ್./4664-70

ದಿನಾಂಕ: 26.07.2023

ದಿನಾಂಕ 21.07.2023 ರಂದು ತಲ್ಲೂರು ಕಾರ್ಯ ಮತ್ತು ಪಾಲನಾ ಉಪವಿಭಾಗದಲ್ಲಿ, ಶ್ರೀ ಪಿ ದಿನೇಶ ಉಪಾಧ್ಯ, ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಉಡುಪಿ ಇವರ ಅಧ್ಯಕ್ಷತೆಯಲ್ಲಿ ನಡೆದ ತಲ್ಲೂರು ಉಪವಿಭಾಗ ವ್ಯಾಪ್ತಿಯ ಜನ ಸಂಪರ್ಕ ಸಭೆಯ ನಡಾವಳಿಗಳು.

**ಹಾಜರಿದ್ದ ಅಧಿಕಾರಿಗಳ ಹೆಸರು :-**

1. ಶ್ರೀ ಪಿ ದಿನೇಶ ಉಪಾಧ್ಯ : ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಉಡುಪಿ
2. ಶ್ರೀ ರಾಕೇಶ್ ಬಿ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಕುಂದಾಪುರ
3. ಶ್ರೀ ರಮೇಶ್ : ಉಪ ನಿಯಂತ್ರಣಾಧಿಕಾರಿ, ಕಾರ್ಯ ಮತ್ತು ಪಾಲನಾ ವೃತ್ತ, ಉಡುಪಿ
4. ಶ್ರೀ ಹರೀಶ್ ಕುಮಾರ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮೆಸ್ಕಾಂ., ತಲ್ಲೂರು
5. ಶ್ರೀಮತಿ ಶೋಭಾ ಜಿ. ಆರ್ : ಸಹಾಯಕ ಇಂಜಿನಿಯರ್ (ತಾಂತ್ರಿಕ), ಮೆಸ್ಕಾಂ., ತಲ್ಲೂರು
6. ಶ್ರೀ ಸುರೇಶ್ ಬಾಬು ಬಿ : ಸಹಾಯಕ ಇಂಜಿನಿಯರ(ವಿ), ಮೆಸ್ಕಾಂ, ತಲ್ಲೂರು
7. ಶ್ರೀ ಪ್ರಕಾಶ್ ಮೊಗವೀರ : ಶಾಖಾಧಿಕಾರಿ, ವಂಡ್ಸೆ ಶಾಖೆ
8. ಶ್ರೀ ದಿನೇಶ್ ಶೆಟ್ಟಿ : ಶಾಖಾಧಿಕಾರಿ, ಗಂಗೊಳ್ಳಿ ಶಾಖೆ
9. ಶ್ರೀ ವಾಸು ಮರಾಠಿ : ಹಿರಿಯ ಸಹಾಯಕ (ಪ್ರಭಾರ), ಮೆಸ್ಕಾಂ., ತಲ್ಲೂರು.

| | |
|---|---|
| ಕಾ.ನಿ.ಇಂ. (ವಿ) | ✓ |
| [illegible] | |
| ಸ.ಕಾ.ನಿ.ಇಂ.-1 | ✓ |
| ಸ.ಕಾ.ನಿ.ಇಂ.-2 | |
| ಸ.ಕಾ.ನಿ.ಇಂ.([illegible]) | |
| ಸ.ಕಾ.ನಿ.ಇಂ.([illegible]) | |
| [illegible] | |

**ಸಭೆಯಲ್ಲಿ ಹಾಜರಿದ್ದ ಗ್ರಾಹಕರು**

1. ಶ್ರೀ ರಾಜು ಮೊವಾಡಿ : ಗ್ರಾಹಕರು
2. ಶ್ರೀ ನಾಗರಾಜು ಮೊವಾಡಿ : ಗ್ರಾಹಕರು
3. ಶ್ರೀಮತಿ ಜ್ಯೋತಿ : ಗ್ರಾಹಕರು
4. ಶ್ರೀ ನಾಗೇಶ ಶೇರಿಗಾರ : ಗ್ರಾಹಕರು
5. ಶ್ರೀ ಗಣೇಶ : ಗ್ರಾಹಕರು
6. ಶ್ರೀ ಬಾಲಚಂದ್ರ ಭಟ್ : ಗ್ರಾಹಕರು

ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಹಾಗೂ ಗ್ರಾಹಕರನ್ನು ಸಭಾಧ್ಯಕ್ಷರು ಸ್ವಾಗತಿಸಿದರು. ತದ ನಂತರ ಈ ಕೆಳಕಂಡ ವಿಷಯಗಳು ಜನಸಂಪರ್ಕ ಸಭೆಯಲ್ಲಿ ಚರ್ಚೆಗೆ ಬಂದವು.

**ಸಭೆಯ ನಡಾವಳಿಯ ವಿವರ:**

1. ಶ್ರೀಮತಿ ಜ್ಯೋತಿ, ಬಿನ್. ರಾಜು ಮೊವಾಡಿರವರು ಬೆಳಕು ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲು ಅರ್ಜಿ ಸಲ್ಲಿಸಿದ್ದು, ವಿದ್ಯುತ್ ಸಂಪರ್ಕ ನೀಡುವಂತೆ ಕೋರಿರುತ್ತಾರೆ.
   ಅದರಂತೆ ಬೆಳಕು ಯೋಜನೆಯಡಿ ಸದ್ರಿಯವರ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕಾರ್ಯಾದೇಶವಾಗಿದ್ದು, ಆದ್ಯತೆಯ ಮೇರೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದೆಂದು ಮಾಹಿತಿ ನೀಡಲಾಗಿರುತ್ತದೆ.

2. ಶ್ರೀ ನಾಗೇಶ ಶೇರುಗಾರ, ಬಿನ್ ಸುಬ್ರಾಯ ಶೇರಿಗಾರ ನಾಣ್ಯಬೆಟ್ಟು, ತಲ್ಲೂರು ಇವರ ಆವರಣದಲ್ಲಿ ಹಾದು ಹೋಗಿರುವ ಸರ್ವಿಸ್ ಮಾರ್ಗದ ಅಂತರ ಕಡಿಮೆ ಇರುವ ಬಗ್ಗೆ ದೂರು ನೀಡಿರುತ್ತಾರೆ.
   ಅದರಂತೆ ಶಾಖಾಧಿಕಾರಿ, ತಲ್ಲೂರುರವರಿಗೆ ಸದ್ರಿ ಸ್ಥಾವರದ ಸ್ಥಳ ಪರಿಶೀಲನೆ ಮಾಡಿ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ.

3. ಶ್ರೀ ಬಿ ಚಂದ್ರ ಇವರು ಶ್ರೀ ಸಿದ್ಧಿವಿನಾಯಕ ದೇವಸ್ಥಾನ ಹಟ್ಟಿಯಂಗಡಿ ಇಲ್ಲಿನ ಅತಿಥಿ ಗೃಹಗಳ ಪರಿವರ್ತಕದ ಡಿಪಿ ಶಿಥಿಲಗೊಂಡಿದ್ದು, ಸರಿಪಡಿಸುವಂತೆ ಕೋರಿರುತ್ತಾರೆ.
   ಅದರಂತೆ ಶಾಖಾಧಿಕಾರಿ, ತಲ್ಲೂರುರವರಿಗೆ ಸದ್ರಿ ಸ್ಥಾವರದ ಸ್ಥಳ ಪರಿಶೀಲನೆ ಮಾಡಿ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ.

ಇನ್ನಾವುದೇ ದೂರುಗಳು ಬರದೇ ಇದ್ದ ನಿಮಿತ್ತ ಸಭೆಯಲ್ಲಿ ತಲ್ಲೂರು ಉಪವಿಭಾಗದ ತಾಂತ್ರಿಕ ಹಾಗೂ ಕಂದಾಯ ವಿಷಯದ ಬಗ್ಗೆ ಚರ್ಚೆಯನ್ನು ನಡೆಸಲಾಯಿತು.

| SP | RP | C | OP ✓ | H |
|---|---|---|---|---|

Mode No:
E Office No: 48 22 88
Scan:
No. of Pages: 31/07/23

ಗ್ರಾಹಕರ ಎಲ್ಲಾ ಮನವಿಗಳಿಗೆ ಸ್ಪಂದಿಸಿ ಸಕಾಲದಲ್ಲಿ ಸೂಕ್ತ ಕ್ರಮಕೈಗೊಳ್ಳಲು, ಕಂಪನಿಯ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸಲು, ವಿಶೇಷವಾಗಿ ಮಾನ್ಸೂನ್ ನಿಮಿತ್ತ ಯಾವುದೇ ರೀತಿಯಲ್ಲಿ ವಿದ್ಯುತ್ ಅಡಚಣೆ ಆಗದಂತೆ ಕರ್ತವ್ಯ ನಿರ್ವಹಿಸಲು ಎಲ್ಲಾ ಅಧಿಕಾರಿಗಳಿಗೆ ಸಭೆಯಲ್ಲಿ ಸಭಾಧ್ಯಕ್ಷರು ಸೂಚಿಸಿದರು ಹಾಗೂ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ವಂದನೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ)
ಕಾರ್ಯ ಮತ್ತು ಪಾಲನಾ ಉಪವಿಭಾಗ
ಮ.ವಿ.ಸ.ಕಂ.ನಿ ತಲ್ಲೂರು.

- ಪ್ರತಿಯನ್ನು ಗೌರವಪೂರ್ವಕವಾಗಿ ಈ ಕೆಳಗಿನವರ ಅವಗಾಹನೆಗೆ ಸಲ್ಲಿಸಿದೆ.
  1. ಅಧೀಕ್ಷಕ ಇಂಜಿನೀಯರ್(ವಿ), ಪಾಲನೆ ಮತ್ತು ನಿರ್ವಹಣೆ ವೃತ್ತ, ಮವಿಸಕಂ, ಎಂ.ಜಿ.ಎಂ ಮೈದಾನದ ಎದುರು, ಕುಂಜಿಬೆಟ್ಟು, ಉಡುಪಿ-576102
  2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಮೆಸ್ಕಾಂ, ಕುಂದಾಪುರ.
- ಪ್ರತಿ:
  1. ಶಾಖಾಧಿಕಾರಿ, ಕಾರ್ಯ ಮತ್ತು ಪಾಲನಾ ಶಾಖೆ, ತಲ್ಲೂರು/ವಂಡ್ಸೆ/ಗಂಗೊಳ್ಳಿ/ನಾಡಾರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
  2. ಹಿರಿಯ ಸಹಾಯಕ, ಕಾರ್ಯ ಮತ್ತು ಪಾಲನಾ ಉಪವಿಭಾಗ, ತಲ್ಲೂರುರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
- ಮಹಾಕಡತ.

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ

*(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)*

**ನೋಂದಾಯಿತ ಕಛೇರಿ: ಕಾರ್ಪೊರೇಟ್ ಕಛೇರಿ,**
**"ಮೆಸ್ಕಾಂ ಭವನ ಕಾವೂರು ಅಡ್ಡ ರಸ್ತೆ,**
**ಬಿಜೈ ಮಂಗಳೂರು-575004.**

CIN:U40109 KA 2002 SGC 030425
**ವೆಬ್‌ಸೈಟ್:** www.mescom.karnataka.gov.in

MESCOM

**ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),**
**ಕಾರ್ಯ ಮತ್ತು ಪಾಲನಾ ಉಪವಿಭಾಗ,**
**ಕೋಟ.**

MOB:9480880473
Ph : 0820-2565386
E-mail:aeemescomkota@gmail.com


ಕ್ರಮಾಂಕ: ಸಕಾಇಂ(ವಿ)/ಸಇಂ(ತಾಂ)/ಮೆಸ್ಕಾಂ/ಕೋಟ/23–24/ 3375-383    ದಿನಾಂಕ: 11.08.23

ದಿನಾಂಕ:26.07.2023ರಂದು ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಉಡುಪಿ ರವರ ಅಧ್ಯಕ್ಷತೆಯಲ್ಲಿ ಕೋಟ ಮೆಸ್ಕಾಂ ಉಪವಿಭಾಗದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

**ಹಾಜರಿದ್ದ ಅಧಿಕಾರಿಗಳು:**

1. ಅಧೀಕ್ಷಕ ಇಂಜಿನಿಯರ್(ವಿ), ಮಂ.ವಿ.ಸ.ಕಂ.ನಿ, ಉಡುಪಿ ವೃತ್ತ.
2. ಉಪಲೆಕ್ಕ ನಿಯಂತ್ರಣಾಧಿಕಾರಿ, ಮಂ.ವಿ.ಸ.ಕಂ.ನಿ, ಉಡುಪಿ ವೃತ್ತ.
3. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮಂ.ವಿ.ಸ.ಕಂ.ನಿ, ಕುಂದಾಪುರ ವಿಭಾಗ.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮಂ.ವಿ.ಸ.ಕಂ.ನಿ, ಕೋಟ ಉಪವಿಭಾಗ.
5. ಸಹಾಯಕ ಇಂಜಿನಿಯರ್(ತಾಂ), ಮಂ.ವಿ.ಸ.ಕಂ.ನಿ, ಕೋಟ ಉಪವಿಭಾಗ.
6. ಸಹಾಯಕ ಲೆಕ್ಕಾಧಿಕಾರಿ, ಮಂ.ವಿ.ಸ.ಕಂ.ನಿ, ಕೋಟ ಉಪವಿಭಾಗ.
7. ಶಾಖಾಧಿಕಾರಿ, ಕೋಟ ಶಾಖೆ.
8. ಶಾಖಾಧಿಕಾರಿ, ಶಿರಿಯಾರ ಶಾಖೆ.
9. ಶಾಖಾಧಿಕಾರಿ, ಸಾಸ್ತಾನ ಶಾಖೆ.

**ಹಾಜರಿದ್ದ ಗುತ್ತಿಗೆದಾರರು:**

1. ಶ್ರೀ ಕೆ. ಶ್ರೀಕಾಂತ ಶೆಣೈ, ಮೆ// ದೇವಿಕಿರಣ್ ಇಲೆಕ್ಟ್ರಿಕಲ್ಸ್, ವಿದ್ಯುತ್ ಗುತ್ತಿಗೆದಾರರು, ಕೋಟ.
2. ಶ್ರೀ ಹೆಚ್. ಗಣೇಶ್, ಮೆ// ಗಣೇಶ್ ಇಲೆಕ್ಟ್ರಿಕಲ್ಸ್, ವಿದ್ಯುತ್ ಗುತ್ತಿಗೆದಾರರು, ಮಯ್ಯಾಡಿ, ಬೈಂದೂರು.
3. ಶ್ರೀ ನಟರಾಜ ಗಾಣಿಗ, ಮೆ// ವಿಘ್ನೇಶ್ವರ ಇಲೆಕ್ಟ್ರಿಕಲ್ಸ್, ವಿದ್ಯುತ್ ಗುತ್ತಿಗೆದಾರರು, ಐರೋಡಿ, ಸಾಸ್ತಾನ.
4. ಶ್ರೀ ಶೇಖರ ಸುವರ್ಣ, ಮೆ// ಸುವರ್ಣ ಇಲೆಕ್ಟ್ರಿಕಲ್ಸ್, ವಿದ್ಯುತ್ ಗುತ್ತಿಗೆದಾರರು, ಶಿರಿಯಾರ, ಸೈಬ್ರಕಟ್ಟೆ.
5. ಶ್ರೀ ಗುರುಪ್ರಸಾದ ಎಂ, ಮೆ// ಸ್ವಾತಿ ಇಲೆಕ್ಟ್ರಿಕಲ್ಸ್, ವಿದ್ಯುತ್ ಗುತ್ತಿಗೆದಾರರು, ಶಿರಿಯಾರ.
6. ಶ್ರೀ ಶೇಖರ ತಿಂಗಳಾಯ, ಮೆ// ಪದ್ಮ ಇಲೆಕ್ಟ್ರಿಕಲ್ಸ್, ವಿದ್ಯುತ್ ಗುತ್ತಿಗೆದಾರರು, ಕೋಟ.

**ಹಾಜರಿದ್ದ ಗ್ರಾಹಕರು**

1. ಶ್ರೀ ಸತೀಶ, ಬಾರಿಕೇರೆ, ಗ್ರಾಮ ಪಂಚಾಯತ್ ಸದಸ್ಯರು, ಕೋಟತಟ್ಟು
2. ಶ್ರೀ ನಾಗರಾಜ ಗಾಣಿಗ, ಸಾಲಿಗ್ರಾಮ
3. ಶ್ರೀ ರವೀಂದ್ರ– ಪತ್ರಕರ್ತರು
4. ಶ್ರೀ ರಾಜೇಶ್
5. ಶ್ರೀ ಜಿ.ಎಸ್ ಆನಂದ ದೇವಾಡಿಗ
6. ಶ್ರೀ ಜೆ.ಸಿ. ನಾಗರಾಜ
7. ಶ್ರೀ ಮೆಲ್ವಿನ್ ಲೂವಿಸ್
8. ಶ್ರೀ ಹೆಚ್. ಸೋಮಶೇಖರ ಶೆಟ್ಟಿ
9. ಶ್ರೀ ಜೆ.ಸಿ. ಕೇಶವ ಆಚಾರ್
10. ಶ್ರೀ ಸುರೇಶ್ ಕುಮಾರ್ ಜಿ.


JP | RP | C | UP | H
49838
14/08/23

11. ಶ್ರೀ ಸಂದೀಪ್
12. ಶ್ರೀ ಶ್ರೀನಿವಾಸ
13. ಶ್ರೀ ರಮೇಶ ಭಂಡಾರಿ
14. ಶ್ರೀ ಸುದೇಶ್

ಅಧೀಕ್ಷಕ ಇಂಜಿನಿಯರ್(ವಿ), ಮಂ.ವಿ.ಸ.ಕಂ.ನಿ, ಉಡುಪಿ ವೃತ್ತರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮಂ.ವಿ.ಸ.ಕಂ.ನಿ, ಕೋಟ ಉಪವಿಭಾಗರವರು ಖುದ್ದಾಗಿ ಹಾಜರಾದ ಎಲ್ಲಾ ಅಧಿಕಾರಿಗಳನ್ನು ಹಾಗೂ ಗ್ರಾಹಕರು, ಗುತ್ತಿಗೆದಾರರು, ಪತ್ರಕರ್ತರನ್ನು ಸ್ವಾಗತಿಸಿದರು. ಸಭಾಧ್ಯಕ್ಷರು ಹಾಜರಿದ್ದ ಸಭಿಕರಲ್ಲಿ ಅಹವಾಲುಗಳನ್ನು ಸಲ್ಲಿಸಲು ಕೋರಿದರು.

ನಾಗರಾಜ ಗಾಣಿಗರವರು ಮಳೆಗಾಲದ ಅವಧಿಯಲ್ಲಿ ಗ್ರಾಹಕರ ದೂರುಗಳಿಗೆ ತುರ್ತಾಗಿ ಸ್ಪಂದಿಸಿದ ಎಲ್ಲಾ ಅಧಿಕಾರಿ/ನೌಕರರನ್ನು ಅಭಿನಂದಿಸಿದರು.

1. **ಶ್ರೀ ಸತೀಶ, ಬಾರಿಕೇರೆ, ಕೋಟತಟ್ಟು ಗ್ರಾಮ ಪಂಚಾಯತ್ ಸದಸ್ಯರು ಇವರು ಜೂನ್ ಹಾಗೂ ಜುಲೈ-2023 ತಿಂಗಳಲ್ಲಿ ಅಧಿಕ ವಿದ್ಯುತ್ ಬಿಲ್ಲು ಮೊತ್ತ ನಮೂದಾಗಿರುವ ಬಗ್ಗೆ ಪ್ರಸ್ತಾಪಿಸಿದರು.**

⇨ ಈ ಬಗ್ಗೆ ಉಪಲೆಕ್ಕ ನಿಯಂತ್ರಣಾಧಿಕಾರಿ, ಮಂ.ವಿ.ಸ.ಕಂ.ನಿ, ಉಡುಪಿ ವೃತ್ತರವರು ಮಾತನಾಡಿ, 2023ನೇ ಸಾಲಿನ ಪರಿಷ್ಕೃತ ದರವು ಏಪ್ರಿಲ್-2023ರಿಂದ ಜಾರಿಯಾಗಿದ್ದು, ಆದರೆ ಏಪ್ರಿಲ್-2023 ಹಾಗೂ ಮೇ-2023 ತಿಂಗಳಿನಲ್ಲಿ ಚುನಾವಣಾ ಪ್ರಕ್ರಿಯೆ ಇರುವುದರಿಂದ ಸದರಿ ಬಿಲ್ಲು ಮೊತ್ತವನ್ನು ಜೂನ್ ಹಾಗೂ ಜುಲೈ-2023 ತಿಂಗಳಿನ ವಿದ್ಯುತ್ ಬಿಲ್ಲಿನಲ್ಲಿ ಸೇರ್ಪಡಿಸಿರುವುದರಿಂದ ಸದರಿ ತಿಂಗಳುಗಳಲ್ಲಿ ವಿದ್ಯುತ್ ಬಿಲ್ಲು ಮೊತ್ತ ಅಧಿಕವಾಗಿರುವುದಾಗಿ ತಿಳಿಸಿದರು.

2. **ಶ್ರೀ ಹೆಚ್. ಸೋಮಶೇಖರ ಶೆಟ್ಟಿ ಇವರು 24*7 ಸೇವಾ ಕೇಂದ್ರದ ದೂರವಾಣಿ ಕರೆಗಳನ್ನು ಸ್ವೀಕರಿಸದೇ ಇರುವ ಬಗ್ಗೆ ಹಾಗೂ ಗ್ರಾಹಕರಿಗೆ ಸರಿಯಾಗಿ ಸ್ಪಂದಿಸದೇ ಇರುವ ಬಗ್ಗೆ ದೂರು ನೀಡಿದರು.**

⇨ ಈ ಬಗ್ಗೆ ಶಾಖಾಧಿಕಾರಿ, ಕೋಟ ಇವರು ಮಾತನಾಡಿ, 24*7 ಸೇವಾ ಕೇಂದ್ರಕ್ಕೆ ಕಂಪೆನಿಯಿಂದ ಯಾವುದೇ ನೌಕರರನ್ನು ನಿಯೋಜನೆ ಮಾಡಿರುವುದಿಲ್ಲ. ನಮ್ಮ ಶಾಖೆಯಲ್ಲಿ ಇರುವ ನೌಕರರನ್ನು ಉಪಯೋಗಿಸಿಕೊಂಡು ದೂರವಾಣಿ ಕರೆ ಮತ್ತು ಗ್ರಾಹಕರ ದೂರುಗಳನ್ನು ನಿರ್ವಹಿಸಬೇಕಾಗಿರುವುದರಿಂದ ದೂರವಾಣಿ ಕರೆಗಳನ್ನು ಸ್ವೀಕರಿಸಲು ಕಷ್ಟಸಾಧ್ಯವಾಗಿರುವುದಾಗಿ ತಿಳಿಸಿದರು.

3. **ಶ್ರೀ ನಾಗರಾಜ ಗಾಣಿಗರವರು ಮಾತಾನಾಡಿ, ಕೋಟ ಶಾಖಾ ವ್ಯಾಪ್ತಿಯಲ್ಲಿನ ಕೋಟ-ಗೋಳಿಯಂಗಡಿ ರಸ್ತೆಯನ್ನು ಲೋಕೋಪಯೋಗಿ ಇಲಾಖಾವತಿಯಿಂದ ಅಗಲೀಕರಣ ಕಾಮಗಾರಿ ನಿರ್ವಹಿಸುತ್ತಿದ್ದು, ಕಾಮಗಾರಿಗೆ ಅಡಚಣೆಯಾಗುವ 11ಕೆವಿ ವಿದ್ಯುತ್ ಕಂಬಗಳನ್ನು ತೆಗೆದು, ಅದೇ ಕಂಬಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವ ಬದಲು ಹಾಲಿ ಇರುವ 11ಕೆವಿ ಕಂಬವನ್ನು ತೆಗೆದು ಹೊಸದಾಗಿ ಸ್ಪನ್ ಕಂಬದ ಮೂಲಕ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲು ಕೋರಿರುತ್ತಾರೆ.**

⇨ ಈ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ.), ಮವಿಸಕಂ, ಕುಂದಾಪುರರವರು ಮಾತನಾಡಿ, ಸದರಿ ಅಂದಾಜುಪಟ್ಟಿಯಲ್ಲಿ ಸ್ಪನ್ ಕಂಬವನ್ನು ನಮೂದಿಸಿ, ಅಂದಾಜುಪಟ್ಟಿಯನ್ನು ಮರು ಸಲ್ಲಿಸುವಂತೆ ಶಾಖಾಧಿಕಾರಿ, ಕೋಟ ಇವರಿಗೆ ಸೂಚಿಸಿದರು.

4. **ಶ್ರೀ ಜೆ.ಸಿ. ಕೇಶವ ಆಚಾರ್‌ರವರು ಕಾರ್ಕಡ ನಾಗನಕಟ್ಟೆ ಹತ್ತಿರ ಹೊಸದಾಗಿ ಸೇತುವೆ ನಿರ್ಮಾಣಗೊಂಡಿದ್ದು, ಹತ್ತಿರವಿರುವ ಪರಿವರ್ತಕವು ಕೆಳಮಟ್ಟದಲ್ಲಿದ್ದು, ಅಪಾಯಕಾರಿ ಸ್ಥಿತಿಯಲ್ಲಿರುವ ಪರಿವರ್ತಕ ಕೇಂದ್ರವನ್ನು ಬದಲಾಯಿಸಲು ಮನವಿ ಸಲ್ಲಿಸಿರುತ್ತಾರೆ.**

⇨ ಈ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ.), ಮವಿಸಕಂ, ಕುಂದಾಪುರರವರು ಮಾತನಾಡಿ, ಕೂಡಲೇ ಸ್ಥಳ ಪರಿಶೀಲಿಸಿ, ಕಂಪೆನಿ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳುವಂತೆ ಶಾಖಾಧಿಕಾರಿ, ಕೋಟರವರಿಗೆ ಸೂಚಿಸಿದರು.

5. **ಶ್ರೀ ಜಿ.ಎಸ್ ಆನಂದ ದೇವಾಡಿಗ, ಅಧ್ಯಕ್ಷರು, ಹಿರೇಮಹಾಲಿಂಗೇಶ್ವರ ದೇವಸ್ಥಾನ ಇವರು ಹಿರೇ ಮಹಾಲಿಂಗೇಶ್ವರ ದೇವಸ್ಥಾನದ ಕೆರೆಯ ಮೇಲೆ ಜೋತಾಡುತ್ತಿರುವ ಎಲ್.ಟಿ ಮಾರ್ಗವನ್ನು ಸ್ಥಳಾಂತರಿಸಲು ಕೋರಿದರು.**

⇨ ಈ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ.), ಮವಿಸಕಂ, ಕುಂದಾಪುರರವರು ಮಾತನಾಡಿ, ಕೂಡಲೇ ಸ್ಥಳ ಪರಿಶೀಲಿಸಿ, ಕಂಪೆನಿ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳುವಂತೆ ಶಾಖಾಧಿಕಾರಿ, ಕೋಟರವರಿಗೆ ಸೂಚಿಸಿದರು.

6. **ಶ್ರೀ ಕೆ. ಶ್ರೀಕಾಂತ ಶೆಣೈ, ಮೆ// ದೇವಿಕಿರಣ್ ಇಲೆಕ್ಟ್ರಿಕಲ್ಸ್, ವಿದ್ಯುತ್ ಗುತ್ತಿಗೆದಾರರು, ಕೋಟ ಇವರು ಗಿಳಿಯಾರು ಹೆಮುಟೆಗುಂದು ಬಳಿ ಲೋ-ವೋಲ್ಟೇಜ್ ಸಮಸ್ಯೆಯಿದ್ದು, ಹೊಸದಾಗಿ ಪರಿವರ್ತಕವನ್ನು ಅಳವಡಿಸುವಂತೆ ಕೋರಿದರು.**

⟹ ಈ ಬಗ್ಗೆ ಅಧೀಕ್ಷಕ ಇಂಜಿನಿಯರ್(ವಿ), ಮಂ.ವಿ.ಸ.ಕಂ.ನಿ, ಉಡುಪಿ ವೃತ್ತರವರು ಮಾತನಾಡಿ, ಶಾಖಾಧಿಕಾರಿ, ಕೋಟ ಇವರಿಗೆ ಸ್ಥಳ ಪರಿಶೀಲಿಸಿ, ಕಂಪೆನಿ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಿದರು.

7. **ಶ್ರೀ ಸುರೇಶ್ ಕುಮಾರ್ ಜಿ. ರವರು ನಮ್ಮ ಜಮೀನಿನಲ್ಲಿ ಹಾದುಹೋದ ಎಲ್.ಟಿ ಮಾರ್ಗವನ್ನು ಸ್ಥಳಾಂತರಿಸುವಂತೆ ಕೋರಿದರು.**

⟹ ಈ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡಿ, ಖಾಸಗಿ ಜಾಗದಲ್ಲಿರುವ ವಿದ್ಯುತ್ ಮಾರ್ಗವನ್ನು ಸ್ವಂತ ಖರ್ಚಿನಲ್ಲಿ ಸ್ಥಳಾಂತರಿಸುವ ಬಗ್ಗೆ ಗ್ರಾಹಕರಿಗೆ ತಿಳಿಸಿದರು.

8. **ಶ್ರೀ ಜೆ.ಸಿ. ನಾಗರಾಜರವರು ಮಣೂರು ಗ್ರಾಮದ ಪಡಿಯಾರ್‌ಮಿಲ್ ಹಿಂಭಾಗ, ಮಣೂರು ಎಂಬಲ್ಲಿ ಸರ್ವೆ ನಂಬ್ರ 253/1ರಲ್ಲಿ ನಿರ್ಮಿಸಿರುವ ಅನಧಿಕೃತ ಬಡಾವಣೆಯಲ್ಲಿ ನಿರ್ಮಿಸಿರುವ ವಾಸ್ತವ್ಯದ ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡದೇ ಇರುವ ಬಗ್ಗೆ ಪ್ರಸ್ತಾಪಿಸಿದರು.**

⟹ ಈ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡಿ, ಸದರಿ ಅರ್ಜಿದಾರರಿಗೆ ಅನಧಿಕೃತ ಬಡಾವಣೆಯ ಮೂಲ ಹಕ್ಕುದಾರರ ದಾಖಲೆ ಪ್ರತಿಯನ್ನು, ಅನಧಿಕೃತ ಬಡಾವಣೆ ಎನ್ನುವ ಬಗ್ಗೆ ಸ್ಥಳೀಯ ಪ್ರಾಧಿಕಾರದಿಂದ ಪತ್ರ ಹಾಗೂ ಇತ್ತೀಚಿನ ಭೂ-ಪರಿವರ್ತಿತ ಆರ್.ಟಿ.ಸಿ/ಎಫ್.ಎಮ್.ಬಿ ಪ್ರತಿಗಳನ್ನು ಸಲ್ಲಿಸಲು ತಿಳಿಸಿದರು. ಸದರಿ ದಾಖಲೆಗಳನ್ನು ಈ ಕಛೇರಿಗೆ ಸಲ್ಲಿಸಿದಲ್ಲಿ, ಕಂಪೆನಿ ನಿಯಮಾನುಸಾರ ಮುಂದಿನ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಅಲ್ಲದೇ ಮೆಸ್ಕಾಂನ ಮೇಲಾಧಿಕಾರಿಗಳು ತಾಂತ್ರಿಕ ಹಾಗೂ ಕಂದಾಯ ಪ್ರಗತಿಯ ವಿಶ್ಲೇಷಣೆ ನಡೆಸಿದರು. ಬಾಕಿ ಕಾಮಗಾರಿಗಳನ್ನು ತುರ್ತಾಗಿ ಮುಗಿಸಿ ಸಮಾಪನಾ ವರದಿ ಸಲ್ಲಿಸುವಂತೆ ಹಾಗೂ ವಿದ್ಯುತ್ ಬಿಲ್ಲು ಬಾಕಿ ಮೊತ್ತವನ್ನು ಶೀಘ್ರವಾಗಿ ವಸೂಲಿ ಮಾಡುವಂತೆ ಸೂಚಿಸಿದರು.

ಧನ್ಯವಾದಗಳೊಂದಿಗೆ ಅಪರಾಹ್ನ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಕಾ ಮತ್ತು ಪಾ ಉಪವಿಭಾಗ, ಕೋಟ
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ
ಕೋಟ ಉಪವಿಭಾಗ, ಉಡುಪಿ

ಪ್ರತಿಗಳು:

1. ಅಧೀಕ್ಷಕ ಇಂಜಿನಿಯರ್(ವಿ) ಮಂ.ವಿ.ಸ.ಕಂ.ನಿ, ಉಡುಪಿ ವೃತ್ತ - ಇವರ ದಯಾಪರ ಅವಗಾಹನೆಗೆ.
2. ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಮಂ.ವಿ.ಸ.ಕಂ.ನಿ, ಉಡುಪಿ ವೃತ್ತ - ಇವರ ದಯಾಪರ ಅವಗಾಹನೆಗೆ.
3. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮಂ.ವಿ.ಸ.ಕಂ.ನಿ, ಕುಂದಾಪುರ ವಿಭಾಗ - ಇವರ ದಯಾಪರ ಅವಗಾಹನೆಗೆ.
4. ಲೆಕ್ಕಾಧಿಕಾರಿಗಳು, ಮ.ವಿ.ಸ.ಕಂ.ನಿ, ಕುಂದಾಪುರ ವಿಭಾಗ - ಇವರ ದಯಾಪರ ಅವಗಾಹನೆಗೆ.
5. ಸಹಾಯಕ ಇಂಜಿನಿಯರ್(ತಾಂ.), ಮಂ.ವಿ.ಸ.ಕಂ.ನಿ, ಕೋಟ ಉಪವಿಭಾಗ.
6. ಸಹಾಯಕ ಲೆಕ್ಕಾಧಿಕಾರಿ, ಮಂ.ವಿ.ಸ.ಕಂ.ನಿ, ಕೋಟ ಉಪವಿಭಾಗ.
7. ಶಾಖಾಧಿಕಾರಿಗಳು- ಮಂ.ವಿ.ಸ.ಕಂ.ನಿ, ಕೋಟ, ಶಿರಿಯಾರ, ಸಾಸ್ತಾನ ಶಾಖೆ - ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ- ಸದರಿ ಸಭೆಯಲ್ಲಿ ಸ್ವೀಕೃತವಾದ ಅಹವಾಲುಗಳನ್ನು ಪಟ್ಟಿ ಮಾಡಿದ್ದು, ಈ ಬಗ್ಗೆ ಸಂಬಂಧಪಟ್ಟ ಶಾಖಾಧಿಕಾರಿಗಳು ಕೂಡಲೇ ಸಮಸ್ಯೆ ಬಗೆಹರಿಸಲು ಕ್ರಮಕೈಗೊಂಡು, ಈ ಕಛೇರಿಗೆ ಅನುಸರಣಾ ವರದಿ ನೀಡುವುದು.

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಮೆಸ್ಕಾಂ
MESCOM

**ಆಂತರಿಕ ಕಛೇರಿ ಪತ್ರ**

| ಇವರಿಂದ, | ಇವರಿಗೆ, |
|---|---|
| ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)<br>ಕಾರ್ಯ ಮತ್ತು ಪಾಲನೆ ಉಪವಿಭಾಗ<br>ಮ.ವಿ.ಸ.ಕಂ., ಬ್ರಹ್ಮಾವರ- 576213. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)<br>ಕಾರ್ಯ ಮತ್ತು ಪಾಲನಾ ವಿಭಾಗ<br>ಮ.ವಿ.ಸ.ಕಂ., ಉಡುಪಿ. |

ಕ್ರಮಾಂಕ: ಸಕಾನಿಇಂ(ವಿ)/ಸ.ಇಂ(ತಾಂ)/ಬಿವಿಆರ್/23-24/ 4231-232 ದಿನಾಂಕ: 18.09.2023

ಸ.ಕಾ.ನಿ.ಇ.(ಕ) ಲೆಕ್ಕಾಧಿಕಾರಿ
ಸ.ಇ. I ಸ. ಲೆಕ್ಕ ಅಧಿಕಾರಿ
ಸ.ಇ. II
ಸ.ಇ. III ಓ.ಸ.(ವ)
ಕಿ.ಇ. ಮುಖ್ಯ ಗುಮಾಸ್ತ
ಸ.ಇಂ. (ಸಿವಿಲ್)
ಕಾ.ವಿ.

ವಿಷಯ: ದಿನಾಂಕ 14.09.2023 ರಂದು ಬ್ರಹ್ಮಾವರ ಉಪವಿಭಾಗ ಕಛೇರಿಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಯನ್ನು ಸಲ್ಲಿಸುವ ಕುರಿತು.

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 14.09.2023 ರಂದು ಬ್ರಹ್ಮಾವರ ಉಪವಿಭಾಗ ಕಛೇರಿಯಲ್ಲಿ ಶ್ರೀ ದಿನೇಶ್ ಉಪಾಧ್ಯ, ಅಧೀಕ್ಷಕ ಇಂಜಿನಿಯರ್(ವಿ)ಮವಿಸಕಂ., ಉಡುಪಿ ವೃತ್ತ ಇವರ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್-2023ನೇ ತಿಂಗಳ ಉಪವಿಭಾಗ ಮಟ್ಟದ ಜನಸಂಪರ್ಕ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ಶ್ರೀ ಕೆ. ಪ್ರಸನ್ನ ಕುಮಾರ್, ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಉಡುಪಿ ವಿಭಾಗ, ಮತ್ತು ಶ್ರೀ ಅಶೋಕ ಪೂಜಾರಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮೆಸ್ಕಾಂ ಬ್ರಹ್ಮಾವರ ಉಪವಿಭಾಗ ಹಾಗೂ ಉಪವಿಭಾಗದ ಎಲ್ಲಾ ಅಧಿಕಾರಿಗಳು ಹಾಜರಿದ್ದರು. ಸದರಿ ಸಭೆಯಲ್ಲಿ 13 ಸಂಖ್ಯೆ ಗ್ರಾಹಕರು ಹಾಜರಾಗಿದ್ದು, ಈ ಕೆಳಕಂಡ ಅಹವಾಲುಗಳನ್ನು ಸ್ವೀಕರಿಸಲಾಯಿತು.

ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ... ಸಂಖ್ಯೆ: 6005 ದಿನಾಂಕ: 18 SEP 2023 ಮ.ವಿ.ಸ.ಕಂ., ಉಡುಪಿ

<u>ದೂರು 1 :-</u> ಶ್ರೀ ಕೆ. ನವೀನಚಂದ್ರ ನಾಯ್ಕ, ಸದಸ್ಯರು ವಾರಂಬಳ್ಳಿ ಗ್ರಾಮ ಪಂಚಾಯತ್ ರವರು ವಾರಂಬಳ್ಳಿ ಗ್ರಾಮದ ಇಂದಿರಾನಗರ ಪರಿವರ್ತಕವು ಓವರ್ ಲೋಡ್ ಆಗಿದ್ದು, ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಕೋರಿರುತ್ತಾರೆ.

ಈ ಬಗ್ಗೆ ಅಧೀಕ್ಷಕ ಇಂಜಿನಿಯರ್(ವಿ)ಮವಿಸಕಂ., ಉಡುಪಿ ವೃತ್ತ ಇವರು ಶಾಖಾಧಿಕಾರಿ ಬ್ರಹ್ಮಾವರ ಶಾಖೆ-1 ರವರಿಗೆ ಸ್ಥಳ ಪರಿಶೀಲಿಸಿ ವಿದ್ಯುತ್ ಹೊರೆಗನುಸಾರವಾಗಿ ಹೆಚ್ಚುವರಿ ಪರಿವರ್ತಕದ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿದರು.

<u>ದೂರು 2 :-</u> ಶ್ರೀ ಉಮೇಶ್ ಪೂಜಾರಿ, ಬ್ರಹ್ಮಾವರ ಇವರು ಬ್ರಹ್ಮಾವರದ ರಥಬೀದಿ ರಸ್ತೆಯಲ್ಲಿರುವ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಎದುರು ಕಬ್ಬಿಣದ ಕಂಬವಿದ್ದು, ಮಳೆಗಾಲದಲ್ಲಿ ಅಪಾಯಕಾರಿ ಸ್ಥಿತಿಯಲ್ಲಿದೆ. ಹಾಗೂ 63ಕೆವಿಎ ಅಯ್ಯಪ್ಪ ಸ್ವಾಮಿ ಪರಿವರ್ತಕದ ವಿದ್ಯುತ್ ತಂತಿಗಳು ತೀರಾ ಹಳೆಯದಾಗಿದ್ದು, ಬದಲಾಯಿಸುವಂತೆ ಕೋರಿದರು.

A(t)-1
21/9

ಈ ಬಗ್ಗೆ ಅಧೀಕ್ಷಕ ಇಂಜಿನಿಯರ್(ವಿ)ಮವಿಸಕಂ., ಉಡುಪಿ ವೃತ್ತ ಇವರು ಶಾಖಾಧಿಕಾರಿ ಬ್ರಹ್ಮಾವರ ಶಾಖೆ-1ರವರಿಗೆ ಸ್ಥಳ ಪರಿಶೀಲಿಸಿ ಶೀಘ್ರದಲ್ಲಿ ಕಬ್ಬಿಣದ ಕಂಬದ ಬದಲಾವಣೆ ಕ್ರಮಕ್ಕೈಗೊಳ್ಳುವಂತೆ ಹಾಗೂ ವಾಹಕ ಬದಲಾವಣೆಗೆ ಪ್ರಸ್ತಾವನೆಯನ್ನು ವ್ಯವಸ್ಥೆ ಸುಧಾರಣೆ ಕಾಮಗಾರಿಯಡಿಯಲ್ಲಿ ಸಲ್ಲಿಸುವಂತೆ ಸೂಚಿಸಿದರು.

**ದೂರು ೩ :-** ಶ್ರೀ ವಿಜಯ್ ಹೊಸೂರು ಇವರ ಹೊಸೂರು ಗ್ರಾಮದ ಕಡಂಗೋಡು ಪರಿಸರದಲ್ಲಿ ಲೋವೋಲ್ಟೇಜ್ ಸಮಸ್ಯೆ ಇದ್ದು, ಶೀಘ್ರದಲ್ಲಿ ಪರಿಹರಿಸುವಂತೆ ಕೋರಿದರು.

ಈ ಬಗ್ಗೆ ಅಧೀಕ್ಷಕ ಇಂಜಿನಿಯರ್(ವಿ)ಮವಿಸಕಂ., ಉಡುಪಿ ವೃತ್ತ ಇವರು ಶಾಖಾಧಿಕಾರಿ ಪೇತ್ರಿ ಅವರಿಗೆ ಸ್ಥಳ ಪರಿಶೀಲಿಸಿ ಕ್ಷೇತ್ರ ವರದಿಗನುಸಾರವಾಗಿ ವಿದ್ಯುತ್ ಹೊರೆಯನ್ನು ಪರಿಶೀಲಿಸಿ ಹೆಚ್ಚುವರಿ ಪರಿವರ್ತಕ ಅಳವಡಿಕೆ ಅಥವಾ ವಾಹಕ ಬದಲಾವಣೆಯ ಅಗತ್ಯವಿದ್ದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿದರು.

**ದೂರು 4 :-** ಶ್ರೀ ರಾಜೀವ ಶೆಟ್ಟಿಗಾರ್, ಚೇರ್ಕಾಡಿ ಇವರು ಚೇರ್ಕಾಡಿ ಗ್ರಾಮದ ಮುಂಡ್ಕಿನಜೆಡ್ಡು ಪರಿಸರದಲ್ಲಿ ಲೋವೋಲ್ಟೇಜ್ ಸಮಸ್ಯೆ ಇದ್ದು, ಪರಿಹರಿಸುವಂತೆ ಕೋರಿದರು..

ಈ ಬಗ್ಗೆ ಅಧೀಕ್ಷಕ ಇಂಜಿನಿಯರ್(ವಿ)ಮವಿಸಕಂ., ಉಡುಪಿ ವೃತ್ತ ಇವರು ಪೇತ್ರಿ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಅಗತ್ಯಗನುಸಾರವಾಗಿ ಹೆಚ್ಚುವರಿ ಪರಿವರ್ತಕದ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿದರು.

**ದೂರು 5 :-** ಶ್ರೀ ಬಿ. ರಾಮಚಂದ್ರ ಕಾಮತ್, ಬಾರಕೂರು ಇವರು ಬಾರಕೂರು ಗ್ರಾಮ ಪಂಚಾಯತ್ ಕಟ್ಟಡ ಎದುರು ಕಬ್ಬಿಣದ ಕಂಬವೊಂದು ಅಪಾಯಕಾರಿ ಸ್ಥಿತಿಯಲ್ಲಿದ್ದು, ಬದಲಾಯಿಸುವಂತೆ ಕೋರಿದರು. ಹಾಗೂ ಬಾರಕೂರು ಪರಿಸರದಲ್ಲಿ ಸಮಯಕ್ಕನುಸಾರವಾಗಿ ಟ್ರೀ ಕಟ್ಟಿಂಗ್ ಮಾಡುವಂತೆ ಮನವಿ ಮಾಡಿದರು.

ಈ ಬಗ್ಗೆ ಅಧೀಕ್ಷಕ ಇಂಜಿನಿಯರ್(ವಿ)ಮವಿಸಕಂ., ಉಡುಪಿ ವೃತ್ತ ಇವರು ಬ್ರಹ್ಮಾವರ-1 ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಕಬ್ಬಿಣದ ಕಂಬ ಬದಲಾವಣೆಗೆ ಶೀಘ್ರದಲ್ಲಿ ಕ್ರಮಕೈಗೊಳ್ಳುವಂತೆ ಸೂಚಿಸಿದರು. ಹಾಗೂ ಹೆಚ್.ಟಿ/ಎಲ್.ಟಿ ಮಾರ್ಗಗಳ ಮೇಲೆ ಬೆಳೆದಿರುವ ಗೆಲ್ಲುಗಳನ್ನು ನಿಯತಕಾಲಿಕವಾಗಿ ಕಡಿಯುವಂತೆ ಸೂಚಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಸಲಾಯಿತು.

(ಅಶೋಕ ಪೂಜಾರಿ)
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪವಿಭಾಗ
ಮ.ವಿ.ಸ.ಕಂ., ಬ್ರಹ್ಮಾವರ.

ಮೆಸ್ಕಾಂ

MESCOM

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ

(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಆಂತರಿಕ ಕಚೇರಿ ಪತ್ರ

ದಿನಾಂಕ 12.10.2023

ಕ್ರಮಾಂಕ: ಸಕಾಇಂ(ವಿ)/ಸ.ಇಂ(ತಾ)ಬೈಂ/3504-3509

ದಿನಾಂಕ: **23-08-2023** ರಂದು ಬೈಂದೂರು ಉಪವಿಭಾಗ ಕಛೇರಿಯಲ್ಲಿ ಬೈಂದೂರು/ನಾವುಂದ/ಕೊಲ್ಲೂರು ಹಾಗೂ ಶಿರೂರು ಶಾಖಾ ವ್ಯಾಪ್ತಿಯ ಗ್ರಾಹಕರ ದೂರುಗಳನ್ನು ಸ್ವೀಕರಿಸಿ ನಡೆಸಿದ ಜನಸಂಪರ್ಕ ಸಭೆಯ ನಡಾವಳಿಗಳು:

ಅಧ್ಯಕ್ಷತೆ: ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನಾ ವೃತ್ತ ಮೆಸ್ಕಾಂ ಉಡುಪಿ.

ಹಾಜರಿದ್ದ ಅಧಿಕಾರಿಗಳು/ನೌಕರರು

1) ಶ್ರೀ ದಿನೇಶ್ ಉಪಾಧ್ಯಾಯ : ಅಧೀಕ್ಷಕ ಇಂಜಿನಿಯರ್(ವಿ)ಮೆಸ್ಕಾಂ, ಉಡುಪಿ ವೃತ್ತ
2) ಶ್ರೀ ರಾಕೇಶ್.ಬಿ. : ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಮೆಸ್ಕಾಂ, ಕುಂದಾಪುರ
3) ಶ್ರೀ ಹರೀಶ್ : ಸ.ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಬೈಂದೂರು
4) ಶ್ರೀ ಸಂಜಯ ಕಿಣಿ : ಸಹಾಯಕ ಲೆಕ್ಕಾಧಿಕಾರಿ, ಮೆಸ್ಕಾಂ ಬೈಂದೂರು
5) ಶ್ರೀ ಶಶಿರಾಜ್ ಶೆಟ್ಟಿಯಾನ್ : ಸಹಾಯಕ ಇಂಜಿನಿಯರ್(ವಿ), ಬೈಂದೂರು
6) ಶ್ರೀ ರಾಘವೇಂದ್ರ ಪಿ : ಶಾಖಾಧಿಕಾರಿ, ಶಿರೂರು ಶಾಖೆ (ಪ್ರಭಾರ)
7) ಶ್ರೀ ವಿಜಯೇಂದ್ರ ಆಚಾರ್ಯ : ಶಾಖಾಧಿಕಾರಿ, ನಾವುಂದ ಶಾಖೆ
8) ಶ್ರೀ ವರ್ಕಿ ಕೆ.ವಿ. : ಶಾಖಾಧಿಕಾರಿ, ಕೊಲ್ಲೂರು ಶಾಖೆ (ಪ್ರಭಾರ)

**ಸಭೆಯಲ್ಲಿ ಹಾಜರಿದ್ದ ಗ್ರಾಹಕರು:**

1) ಶ್ರೀ ಮಂಜುನಾಥ ಆಚಾರ್ಯ ಶಿರೂರು ಫೋನ್ ನಂ: 9900295326.
2) ಶ್ರೀಮತಿ ಸುಮನಾ ಶೆಣೈ, ಬೈಂದೂರು ಫೋನ್ ನಂ: 9880199867.
3) ಶ್ರೀಮತಿ ಸವಿತಾ, ಬೈಂದೂರು ಫೋನ್ ನಂ: 94817505665
4) ಸಾಯಿ ಕುಮಾರ್ ಗೋಳಿಹೊಳೆ ಫೋನ್ ನಂ: 9900476756
5) ಶ್ರೀ ವೆಂಕಟೇಶ್ ಪೂಜಾರಿ ಫೋನ್ ನಂ: 9901398280.
6) ಶ್ರೀ ನಾಗಪ್ಪ ಬೈಂದೂರು ಫೋನ್ ನಂ: 9448815145
7) ಶ್ರೀ ಗಣೇಶ್ ಕೆ ಬೈಂದೂರು ಫೋನ್ ನಂ: 9686395933
8) ಶ್ರೀ ಸುನಿಲ್ ಕುಮಾರ್ ಬೈಂದೂರು ಫೋನ್ ನಂ: 9945181945
9) ಶ್ರೀ ಪ್ರದೀಪ್ ಬೈಂದೂರು ಫೋನ್ ನಂ: 8073548824
10) ಶ್ರೀ ಶ್ರೀನಿವಾಸ ಹೆಬ್ಬಾರ್ ಬೈಂದೂರು ಫೋನ್ ನಂ: 9845771779
11) ಶ್ರೀ ಮಾಧವ ಬೈಂದೂರು ಫೋನ್ ನಂ: 9448857497
12) ಶ್ರೀ ಶ್ರೀನಿವಾಸ್ ಪೂಜಾರಿ ಬೈಂದೂರು ಫೋನ್ ನಂ: 9449168021
13) ಶ್ರೀ ಮಂಜುನಾಥ್ ರಾವ್ ಬೈಂದೂರು ಫೋನ್ ನಂ: 9880499531
14) ಶ್ರೀ ಉದಯ್ ಚಂದ್ರ ಬಿಜೂರ್ ಬೈಂದೂರು ಫೋನ್ ನಂ: 8792543521

15) ಶ್ರೀ ರಾಜೇಂದ್ರ ಎಂ ಬೈಂದೂರು ಫೋನ್ ನಂ: 9945797364

16) ಶ್ರೀ ಸಂಜೀವ್ ಹೊಸೂರ್ ಬೈಂದೂರು ಫೋನ್ ನಂ: 9686142108

17) ಶ್ರೀ ರಾಘವೇಂದ್ರ ಹೊಸೂರ್ ಬೈಂದೂರು ಫೋನ್ ನಂ: 9901985828

18) ಶ್ರೀ ಈಶ್ವರ್ ಬಾದ ಬೈಂದೂರು ಫೋನ್ ನಂ: 9743419384

ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ ಮವಿಸಕಂನಿ ಉಡುಪಿ ರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಲಾಯಿತು.

ಸದರಿ ಸಭೆಗೆ ಹಾಜರಾದ ಎಲ್ಲಾ ಅಧಿಕಾರಿ/ ನೌಕರರನ್ನು ಸಭೆಗೆ ಸ್ವಾಗತಿಸಿ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

**ಸಭೆಯಲ್ಲಿ ಸಾರ್ವಜನಿಕರು ನೀಡಿದ ದೂರುಗಳು ಮತ್ತು ವಿಷಯಗಳು ಈ ಕೆಳಗಿನಂತಿದೆ.**

1. ಶ್ರೀ ಮಂಜುನಾಥ ಆಚಾರ್ಯ ಶಿರೂರು ಇವರು ತಮಗೆ ಅಧಿಕ ಬಿಲ್ಲು ಬಂದಿರುವ ಬಗ್ಗೆ ತಮ್ಮ ದೂರನ್ನು ತಿಳಿಸಿರುತ್ತಾರೆ.
   ಕೈಗೊಂಡ ಕ್ರಮ : ಸ್ಥಳದಲ್ಲಿಯೇ ಸಮಸ್ಯೆಯನ್ನು ಬಗೆಹರಿಸಲಾಯಿತು.

2. ಶ್ರೀಮತಿ ಸುಮನಾ ಶೆಣೈ, ಬೈಂದೂರು ಇವರು ತಮಗೆ ಅಧಿಕ ಬಿಲ್ಲು ಬಂದಿರುವ ಬಗ್ಗೆ ತಮ್ಮ ದೂರನ್ನು ತಿಳಿಸಿರುತ್ತಾರೆ.
   ಕೈಗೊಂಡ ಕ್ರಮ : ಸ್ಥಳದಲ್ಲಿಯೇ ಸಮಸ್ಯೆಯನ್ನು ಬಗೆಹರಿಸಲಾಯಿತು.

3. ಶ್ರೀ ಉದಯ್ ಚಂದ್ರ ಬಿಜೂರ್ ಮತ್ತು ರಾಜೇಂದ್ರ ಎಂ ಇವರುಗಳು ಬಿಜೂರು ಅರೆಕಲ್ಲು ಭಾಗದಲ್ಲಿನ ವಿದ್ಯುತ್ ತಂತಿಗಳು ಶಿಥಿಲಗೊಂಡಿದ್ದು ಬದಲಾಯಿಸುವ ಕುರಿತು ದೂರು ದಾಖಲಿಸಿರುತ್ತಾರೆ.
   ಕೈಗೊಂಡ ಕ್ರಮ : ಶೀಘ್ರದಲ್ಲಿ ಸ್ಥಳ ಪರಿಶೀಲನೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಲಾಯಿತು.

4. ಶ್ರೀ ರಾಘವೇಂದ್ರ ಹೊಸೂರ್ ಇವರು ಲೇಔಟ್ ಭಾಗದಲ್ಲಿ ವಿದ್ಯುದ್ದೀಕರಣದ ಕುರಿತು ತಮಗೆ ಇದ್ದ ಪ್ರಶ್ನೆಗಳನ್ನು ವ್ಯಕ್ತಪಡಿಸಿರುತ್ತಾರೆ.
   ಕೈಗೊಂಡ ಕ್ರಮ : ಲೇಔಟ್ ವಿದ್ಯುದ್ದೀಕರಣದ ಕುರಿತು ಕಂಪೆನಿಯ ವಿಧಾನಗಳನ್ನು ತಿಳಿಸಿ ಸ್ಥಳದಲ್ಲಿಯೇ ಸಮಸ್ಯೆಯನ್ನು ಬಗೆಹರಿಸಲಾಯಿತು.

5. ಶ್ರೀ ಈಶ್ವರ್ ಬಾದ ಇವರು ಎಂ.ಜಿ. ರಸ್ತೆ ಭಾಗದಲ್ಲಿನ ವಿದ್ಯುತ್ ತಂತಿಗಳು ಶಿಥಿಲಗೊಂಡಿದ್ದು ಬದಲಾಯಿಸುವ ಕುರಿತು ದೂರು ದಾಖಲಿಸಿರುತ್ತಾರೆ.
   ಕೈಗೊಂಡ ಕ್ರಮ : ಶೀಘ್ರದಲ್ಲಿ ಸ್ಥಳ ಪರಿಶೀಲನೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಲಾಯಿತು.

ಕೊನೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ವಂದನಾರ್ಪಣೆ ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

12/10/23

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ನಿರ್ವಹಣೆ ಮತ್ತು ಪಾಲನೆ ಉಪವಿಭಾಗ
ಮ.ವಿ.ಸ.ಕಂ.ನಿ ಬೈಂದೂರು.

ಪ್ರತಿಯನ್ನು ಗೌರವಪೂರ್ವಕವಾಗಿ ಈ ಕೆಳಗಿನವರ ಮಾಹಿತಿಗಾಗಿ ಸಲ್ಲಿಸಿದೆ.

1) ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ ಮವಿಸಕಂನಿ ಉಡುಪಿ ರವರಿಗೆ ಸಲ್ಲಿಸಿದೆ.
2) ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನಾ ವಿಭಾಗ, ಮ.ವಿ.ಸ.ಕಂ.ನಿ ಕುಂದಾಪುರ ರವರಿಗೆ ಸಲ್ಲಿಸಿದೆ.

ಪ್ರತಿ:– ಶಾಖಾಧಿಕಾರಿಗಳು, ಕಾರ್ಯ ಮತ್ತು ಪಾಲನೆ ಶಾಖೆ, ಬೈಂದೂರು/ಕೊಲ್ಲೂರು/ಶಿರೂರು/ ನಾವುಂದರವರು – ಈ ಬಗ್ಗೆ ಮೇಲೆ ತಿಳಿಸಿರುವ ದೂರುಗಳ ಬಗ್ಗೆ ತಕ್ಷಣವೇ ಸ್ಥಳ ಪರಿಶೀಲಿಸಿ ಸಮಸ್ಯೆ ಪರಿಹಾರಕ್ಕಾಗಿ ಕ್ರಮ ಕೈಗೊಳ್ಳುವುದು ಹಾಗೂ ಅಗತ್ಯವಿದ್ದರೆ ಕಾಮಗಾರಿಗೆ ಬೇಕಾದ ಅಂದಾಜು ಪಟ್ಟಿಯನ್ನು ಮುಂದಿನ 1 ವಾರದೊಳಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ

(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಆಂತರಿಕ ಕಛೇರಿ ಪತ್ರ

ಕಾರ್ಯನಿರ್ವಾಹಕ ಇಂಜಿನಿಯರ್ ... ಸಂಖ್ಯೆ: 4176 ದಿನಾಂಕ: 11/10/23

| ಇವರಿಂದ, | ಇವರಿಗೆ, |
| --- | --- |
| ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)<br>ಮೆಸ್ಕಾಂ ನಿಯಮಿತ,<br>ಹೆಬ್ರಿ ಉಪವಿಭಾಗ | ಕಾರ್ಯನಿರ್ವಾಹಕ ಇಂಜಿನಿಯರ್(ವಿ)<br>ಕಾರ್ಯ ಮತ್ತು ಪಾಲನೆ ವಿಭಾಗ,<br>ಮಂ.ವಿ.ಸ.ಕಂ.(ನಿ), ಕಾರ್ಕಳ–574104 |

ಸಂಖ್ಯೆ: ಸ.ಕಾ.ನಿ.ಇಂ(ವಿ)/ಹೆಬ್ರಿ/22–23/ 2288-93 ದಿನಾಂಕ: 10/10/2023

ಲಗತ್ತು:

ದಿನಾಂಕ:–11–09–2023 ರಂದು ಪೂರ್ವಾಹ್ನ ಸಮಯ 10.30 ಗಂಟೆಗೆ ಹೆಬ್ರಿ ಉಪವಿಭಾಗದಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ಜನಸಂಪರ್ಕ ಸಭೆ ನಡೆಸಲಾಯಿತು.

**ಸಭೆಯಲ್ಲಿ ಹಾಜರಾಗಿದ್ದ ಅಧಿಕಾರಿಗಳು**

1. ಶ್ರೀ. ದಿನೇಶ್ ಉಪಾಧ್ಯಾಯ : ಅಧೀಕ್ಷಕ ಇಂಜಿನಿಯರ್ (ವಿ), ಉಡುಪಿ ವೃತ್ತ, ಮೆಸ್ಕಾಂ ಉಡುಪಿ.
2. ಶ್ರೀ. ರೂಪಕಲಾ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಕಳ ವಿಭಾಗ,
3. ಶ್ರೀ. ನಾಗರಾಜ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮೆಸ್ಕಾಂ ಹೆಬ್ರಿ ಉಪವಿಭಾಗ.
4. ಶ್ರೀ. ಶಿವಕುಮಾರ್.ವಿ : ಹಿರಿಯ ಸಹಾಯಕರು, ಮೆಸ್ಕಾಂ ಹೆಬ್ರಿ.
6. ಶ್ರೀ.ಲಕ್ಷ್ಮೀಶ ಮಂಜಪ್ಪ ನಾಯ್ಕ : ಕಿರಿಯ ಇಂಜಿನಿಯರ್(ವಿ), ಮೆಸ್ಕಾಂ ಹೆಬ್ರಿ ಶಾಖೆ.
7. ಶ್ರೀ. ಸಂದೀಪ್ : ಕಿರಿಯ ಇಂಜಿನಿಯರ್(ವಿ), ಮೆಸ್ಕಾಂ ಅಜೆಕಾರು ಶಾಖೆ
8. ಶ್ರೀ. ರಾಘವೇಂದ್ರ ನಾಯ್ಕ : ಕಿರಿಯ ಇಂಜಿನಿಯರ್(ವಿ), ಮೆಸ್ಕಾಂ ಮುದ್ರಾಡಿ ಶಾಖೆ

**ಭಾಗವಹಿಸಿದ ಗ್ರಾಹಕರ ವಿವರ :**

1. ಶ್ರೀ. ಎಚ್.ವಿ ಹೆಗ್ಡೆ, ಸೀತಾನದಿ ಗ್ರಾಮ ಮತ್ತು ಅಂಚೆ, ಹೆಬ್ರಿ ತಾಲೂಕು.
2. ಶ್ರೀ. ಸುಕುಮಾರ್ ಆಚಾರ್, ಶಿವಪುರ ಗ್ರಾಮ, ಹೆಬ್ರಿ ತಾಲೂಕು
3. ಶ್ರೀ. ದತ್ತ ಶೆಟ್ಟಿ, ಹೆಬ್ರಿ ಗ್ರಾಮ, ಹೆಬ್ರಿ ತಾಲೂಕು.
4. ಶ್ರೀ ಸುಮಲತಾ ಹೆಬ್ಬಾರ್, ಹೆಬ್ರಿ ಗ್ರಾಮ, ಹೆಬ್ರಿ ತಾಲೂಕು
5. ಶ್ರೀ. ಸುಧಾಕರ ನಾಯ್ಕ, ಮಡಾಮಕ್ಕಿ, ಹೆಬ್ರಿ ತಾಲೂಕು.
6. ಶ್ರೀ. ಹೆಚ್.ಬಿ ಸುರೇಶ್, ಚಾರ, ಹೆಬ್ರಿ ತಾಲೂಕು.
7. ಶ್ರೀ. ಸುಧಾಕರ ಶೆಟ್ಟಿ, ಕುಚ್ಚೂರು, ಹೆಬ್ರಿ ತಾಲೂಕು.
8. ಶ್ರೀ. ಸುಕೇಶ್ ಶೆಟ್ಟಿ, ಹೆಬ್ರಿ ಗ್ರಾಮ, ಹೆಬ್ರಿ ತಾಲೂಕು.
9. ಶ್ರೀ. ರಮೇಶ್ ಶೆಟ್ಟಿ, ಹೆಬ್ರಿ ಗ್ರಾಮ, ಹೆಬ್ರಿ ತಾಲೂಕು.
10. ಶ್ರೀ. ಶ್ರೀನಿವಾಸ ಹೆಬ್ಬಾರ್, ಶಿವಪುರ ಗ್ರಾಮ, ಹೆಬ್ರಿ ತಾಲೂಕು.

| ಮ.ವಿ.ಸ.ಕಂ (ನಿ) ಕಾರ್ಕಳ ವಿಭಾಗ | |
| --- | --- |
| ಸ.ಕಾ.ನಿ.ಇಂ (ಠ) | |
| ಲೆಕ್ಕಾಧಿಕಾರಿ | |
| ಅಧೀಕ್ಷಕರು (ಆಂ.ಪ) | |
| ಸ.ಇಂ (ವಿಜಿಲ್) | |
| ಕಿ.ಇ.ಸ | |

**ಸಭೆಯ ನಡಾವಳಿಗಳು:–**

1. ಶಂಕರನಾರಾಯಣ ಉಪವಿಭಾಗಕ್ಕೆ ಸಂಬಂಧಪಟ್ಟ ಮಡಾಮಕ್ಕಿ ಗ್ರಾಮಕ್ಕೆ ಪ್ರಸ್ತುತ ನಾಡ್ಪಲು ಫೀಡರಿನಿಂದ ವಿದ್ಯುತ್ ಸಂಪರ್ಕ ನೀಡುತ್ತಿದ್ದು, ತುಂಬಾ ವಿದ್ಯುತ್ ಅಡಚಣೆ ಆಗುತ್ತಿರುವುದಾಗಿ ಮತ್ತು ಬೆಳೆಂಜೆ ಫೀಡರಿನಿಂದ ವಿದ್ಯುತ್ ಸಂಪರ್ಕ ನೀಡುವಂತೆ ಸುಧಾಕರ ನಾಯ್ಕ ಮಡಾಮಕ್ಕಿ ಇವರ ಮನವಿ.

   ಸದರಿ ಗ್ರಾಮವು ಬೆಳ್ವೆ ಶಾಖೆಗೆ ಸಂಬಂಧಪಟ್ಟಿದ್ದು, ಬೆಳೆಂಜೆ ಫೀಡರಿನ ಮೂಲಕ ನೀಡುವ ಲಿಂಕ್ ಲೈನ್ ಮಾರ್ಗವು ಹೆಬ್ರಿ ಕಾಡಿನ ಮಧ್ಯೆ ಹಾದುಹೋಗಿರುತ್ತದೆ ಮತ್ತು ರಾತ್ರಿ ಹೊತ್ತಿನಲ್ಲಿ ವಿದ್ಯುತ್

ಅಡಚಣೆಯಾದಾಗ ಕಾಡು ಪ್ರಾಣಿಗಳ ಹಾವಳಿಯಿಂದಾಗಿ ಮಾರ್ಗವನ್ನು ಸರಿಪಡಿಸಲು ಕಷ್ಟ ಸಾಧ್ಯವಾದ್ದರಿಂದ ಹಾಲಿ ನಾಡ್ಪಾಲು ಫೀಡರಿನಿಂದ ವಿದ್ಯುತ್ ಸಂಪರ್ಕ ನೀಡಲಾಗಿದ್ದು, ಮುಂದಿನ ದಿನಗಳಲ್ಲಿ ವಿದ್ಯುತ್ ಅಡಚಣೆ ಕಡಿಮೆಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಶಾಖಾಧಿಕಾರಿ, ಹೆಬ್ರಿಯವರು ತಿಳಿಸಿದರು.

2. ಆರ್.ಆರ್ ನಂಬ್ರ 92663 ಸ್ಥಾವರ ಸಂಖ್ಯೆಗೆ Audit short claim ನಲ್ಲಿ ಹಿಂಬಿಲ್ಲು ನೀಡಿರುವುದರ ಬಗ್ಗೆ ಸುಧಾಕರ ನಾಯ್ಕ ಹೆಬ್ರಿ ಇವರು ವಿಚಾರಿಸಿರುತ್ತಾರೆ.

   ಸದರಿ ಆರ್.ಆರ್.ಸಂಖ್ಯೆಯ ಹಿಂಬಿಲ್ಲಿನ ಬಗ್ಗೆ ಹಿರಿಯ ಸಹಾಯಕರು ವಿವರವಾಗಿ ತಿಳಿಸಿರುತ್ತಾರೆ.

3. ಸೀತಾನದಿ ಬಂಡೀಮಠ ಎಂಬಲ್ಲಿ ಲೋವೋಲ್ಟೇಜ್ ಸಮಸ್ಯೆ ಕುರಿತು ಹೆಚ್.ವಿ ಹೆಗ್ಡೆ ಇವರು ತಿಳಿಸಿರುತ್ತಾರೆ.

   ಸ್ಥಳ ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಲು ಅಧೀಕ್ಷಕ ಇಂಜಿನಿಯರ್(ವಿ) ಇವರು ಶಾಖಾಧಿಕಾರಿ ಹೆಬ್ರಿ ಇವರಿಗೆ ತಿಳಿಸಿರುತ್ತಾರೆ.

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಮೆಸ್ಕಾಂ ನಿಯಮಿತ, ಹೆಬ್ರಿ ಉಪವಿಭಾಗ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಪಾಲನೆ ಮತ್ತು ನಿರ್ವಹಣೆ ಉಪವಿಭಾಗ
ಮೆಸ್ಕಾಂ ನಿಯಮಿತ, ಹೆಬ್ರಿ-576 112

ಪ್ರತಿಗಳು:1) ಅಧೀಕ್ಷಕ ಇಂಜಿನಿಯರ್(ವಿ), ಪಾಲನೆ ಮತ್ತು ನಿರ್ವಹಣೆ ವೃತ್ತ, ಮ.ವಿ.ಸ.ಕಂ ಕುಂಜಿಬೆಟ್ಟು ಉಡುಪಿರವರ ದಯಾಪರ ಅವಗಾಹನೆಗಾಗಿ.

2) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಕಳ ವಿಭಾಗ ಕಛೇರಿ, ಮೆಸ್ಕಾಂ ಕಾರ್ಕಳ ರವರವ ದಯಾಪರ ಅವಗಾಹನೆಗೆ.

3) ಸಹಾಯಕ ಲೆಕ್ಕಾಧಿಕಾರಿ, ಮೆಸ್ಕಾಂ ನಿಯಮಿತ, ಹೆಬ್ರಿ ಉಪವಿಭಾಗ, ಹೆಬ್ರಿ.

4) ಶಾಖಾಧಿಕಾರಿ, ಮೆಸ್ಕಾಂ ನಿಯಮಿತ ಹೆಬ್ರಿ/ಅಜೆಕಾರು/ಮುದ್ರಾಡಿ.

5) ಕಛೇರಿ ಪ್ರತಿ.

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ

(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ.),
ಮೆಸ್ಕಾಂ ನಿಯಮಿತ, ಉಪ ವಿಭಾಗ,
ಕಾಪು–574106

Ph:0820-2579977
Mobile No: 9448289498
email i.d:aee_kaup@rediffmail.com


ಕ್ರ.ಸಂ:ಸಕಾನಿಇಂ/ಸ.ಇಂ(ತಾಂ)/ಕಾಪು/ 2023-24/ ಎಫ್–46/ 2759-68 ದಿನಾಂಕ: 21-9-2023

ನಂಬ್ರ: 6126
ದಿನಾಂಕ: 26 SEP 2023
ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಮ.ವಿ.ಸ.ಕಂ., ಉಡುಪಿ

## ಜನಸಂಪರ್ಕ ಸಭೆ

ದಿನಾಂಕ 20.09.2023 ರಂದು ಮವಿಸಕಂ ಕಾಪು ಕಾ. ಮತ್ತು, ಪಾ. ಉಪ ವಿಭಾಗದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿ.

**ಅಧ್ಯಕ್ಷತೆ : ಶ್ರೀ ಪಿ ದಿನೇಶ್ ಉಪಾಧ್ಯಾಯ : ಅಧೀಕ್ಷಕ ಇಂಜಿನಿಯರ್ (ವಿ.), ವೃತ್ತ ಕಛೇರಿ, ಉಡುಪಿ**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1) ಶ್ರೀಪ್ರಸನ್ನ ಕುಮಾರ್ : ಕಾರ್ಯನಿರ್ವಾಹಕ ಇಂಜಿನಿಯರ್ (ವಿ.), ಮವಿಸಕಂ, ಕಾ. ಮತ್ತು ಪಾ. ವೃತ್ತ ಕಛೇರಿ, ಉಡುಪಿ
2) ಶ್ರೀ ಸುಷನ್ ಪಿ.ಸಿ.: ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ),ಮವಿಸಕಂ, ಉಪವಿಭಾಗ ಕಾಪು
3) ಶ್ರೀ ಆನಂದ ಎಸ್ : ಸಹಾಯಕ ಇಂಜಿನಿಯರ್ (ವಿ)(ತಾಂತ್ರಿಕ ಶಾಖೆ), ಉಪವಿಭಾಗ ಕಾಪು
4) ಶ್ರೀ ಅಜಯ್ : ಶಾಖಾಧಿಕಾರಿ, ಕಾ. ಮತ್ತು ಪಾ. ಶಾಖೆ, ಕಾಪು/ಕಾ ಮತ್ತು ಪಾ ಶಾಖೆ, ಪಡುಬಿದ್ರಿ (ಪ್ರಭಾರ)
5) ಶ್ರೀ ರಾಜೇಶ್ ನಾಯಕ್ : ಕಿರಿಯ ಇಂಜಿನಿಯರ್ (ವಿ), ಕಟಪಾಡಿ ಶಾಖೆ/ಕಾ ಮತ್ತು ಪಾ ಶಾಖೆ,ಮುದರಂಗಡಿ(ಪ್ರಭಾರ)
6) ಶ್ರೀಮತಿ ಚಂದ್ರಿಕಾ ದೀಕ್ಷಿತ್ : ಹಿರಿಯ ಸಹಾಯಕಿ ಪಡುಬಿದ್ರಿ ಶಾಖೆ
7) ಶ್ರೀ ಪ್ರದೀಪ್, ಮೇಲ್ವಿಚಾರಕ, ಶಿರ್ವ ಶಾಖೆ
8) ಶ್ರೀ ಗಣೇಶ್ : ಮೇಲ್ವಿಚಾರಕ, ಪಡುಬಿದ್ರಿ ಶಾಖೆ
9) ಶ್ರೀ ಕೆ ರವಿರಾಜ್ : ಸಹಾಯಕ, ಕಾಪು

ಸ.ಕಾ.ನಿ.ಇ.(ಕ) ಲೆಕ್ಕಾಧಿಕಾರಿ
ಸ.ಇ.I ಸ. ಲೆಕ್ಕ ಅಧಿಕಾರಿ
ಸ.ಇ.II
ಸ.ಇ.III ಪಿ.ಸ (ಸ)
ಕಿ.ಇ. ಮುಖ್ಯ ಗುಮಾಸ್ತ
ಸ.ಇಂ.(ಒವಿಲ್) ಕಿ.ಆ.ಸ.
ಕಾ.ನಿ. ಅಭಿಯಂತರರು

**ಸಭೆಯಲ್ಲಿ ಹಾಜರಿದ್ದ ಗ್ರಾಹಕರು**

1) ಶ್ರೀ ದಿನೇಶ್ ಆರ್ ಕೋಟ್ಯಾನ್, ಮುಳೂರು - 9845118056
2) ಶ್ರೀ ದಾಮೋದರ ಎನ್ ಆಚಾರ್ಯ– 9845954908
3) ಶ್ರೀ ಕೆ.ಆರ್. ಪಾಟ್ಕರ್ ಶಿರ್ವ– 9880724512
4) ಶ್ರೀ ವಿರೇಂದ್ರ ಪಾಟ್ಕರ್, ಶಿರ್ವ, ಬಂಟಕಲ್ಲು – 9141576400
5) ಶ್ರೀ ಪುಂಡಲೀಕ ಮರಾಠೆ, ಪತ್ರಕರ್ತರು, ಬಂಟಕಲ್ಲು – 9448252242

**ಸಭೆಯಲ್ಲಿ ನಡೆದ ಗ್ರಾಹಕರ ಕುಂದು ಕೊರತೆ ಮತ್ತು ಪರಿಹಾರ**

1. **ಸಮಸ್ಯೆ:** 33/11 ಕೆವಿ ಶಿರ್ವ ಉಪಕೇಂದ್ರದ ಹತ್ತಿರದ ರಸ್ತೆಯ ಬದಿಯಲ್ಲಿ ವಿದ್ಯುತ್ ಕಂಬಗಳನ್ನು Unload ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ ಎಂದು ವೀರೇಂದ್ರ ಪಾಟ್ಕರ್, ಬಂಟಕಲ್ಲು ಇವರು ಸಭೆಯಲ್ಲಿ ತಿಳಿಸಿರುತ್ತಾರೆ.

   ಕ್ರಮ: ಈಗಾಗಲೇ ರಸ್ತೆಯ ಬದಿಯಲ್ಲಿರುವ ಕಂಬಗಳನ್ನು ಕಾಮಗಾರಿಗೆ ಉಪಯೋಗಿಸಿಕೊಳ್ಳಲಾಗುತ್ತಿದೆ. ಮುಂದಕ್ಕೆ ಸರಬರಾಜು ಆಗುವ ಕಂಬಗಳನ್ನು ಸೂಕ್ತ ಜಾಗದಲ್ಲಿ ಇರಿಸುವುದಾಗಿ ತಿಳಿಸಲಾಯಿತು.

JMA 3/10

2. **ಸಮಸ್ಯೆ:** 63 ಕೆವಿಎ ಕೋಡುಗುಡ್ಡೆ ವಿದ್ಯುತ್ ಪರಿವರ್ತಕದ ಎಲ್ ಟಿ ವಯರುಗಳು ಹಳೆಯದಾಗಿ ತುಂಡಾಗುತ್ತಿದ್ದು ಹಳೆಯ ತಂತಿಗಳನ್ನು ಬದಲಾವಣೆ ಮಾಡುವಂತೆ ವೀರೇಂದ್ರ ಪಾಟ್ಕರ್, ಬಂಟಕಲ್ಲು ಇವರು ಸಭೆಯಲ್ಲಿ ತಿಳಿಸಿರುತ್ತಾರೆ.

   **ಕ್ರಮ:** ಈಗಾಗಲೇ 2023-24 ರ ಸಾಲಿನ ಕ್ರಿಯಾಯೋಜನೆಯಲ್ಲಿ ಅಂದಾಜುಪಟ್ಟಿಯನ್ನು ತಯಾರಿಸಿ ಮಂಜೂರಾತಿಗಾಗಿ ವಿಭಾಗಕ್ಕೆ ಸಲ್ಲಿಸಿದ್ದು ಮಂಜೂರಾತಿ ನಂತರ ಹಳೆಯ ತಂತಿಗಳನ್ನು ಬದಲಾಯಿಸಲಾಗುವುದು ಎಂದು ತಿಳಿಸಲಾಯಿತು.

3. **ಸಮಸ್ಯೆ:** ಶಿರ್ವ ಸಮುದಾಯ ಆರೋಗ್ಯ ಕೇಂದ್ರದ ಮುಂಭಾಗದಲ್ಲಿರುವ ಅಪಾಯಕಾರಿ ವಿದ್ಯುತ್ ಕಂಬವನ್ನು ಸ್ಥಳಾಂತರಿಸುವಂತೆ ಕೆ ಆರ್ ಪಾಟ್ಕರ್ ಇವರು ಸಭೆಯಲ್ಲಿ, ತಿಳಿಸಿರುತ್ತಾರೆ.

   **ಕ್ರಮ:** ಶಿರ್ವ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಂಡು ಈ ಕಛೇರಿಗೆ ವರದಿ ನೀಡಲು ಸೂಚಿಸಲಾಗಿದೆ.

4 **ಸಮಸ್ಯೆ:** 63 ಕೆವಿಎ ಬಿ.ಸಿ. ರೋಡ್ ವಿದ್ಯುತ್ ಪರಿವರ್ತಕದ ಪಕ್ಕ ಪ್ರದೇಶದಲ್ಲಿ ಹಳೆಯ ಕಂಬ ಮತ್ತು ವಯರುಗಳು ಇದ್ದು, ಅವುಗಳನ್ನು ಬದಲಾವಣೆ ಮಾಡುವಂತೆ ಕೆ ಆರ್ ಪಾಟ್ಕರ್ ಇವರು ಸಭೆಯಲ್ಲಿ ತಿಳಿಸಿರುತ್ತಾರೆ.

**ಕ್ರಮ:** ಮುಂದಿನ ಕ್ರಿಯಾ ಯೋಜನೆಯಲ್ಲಿ ಆದ್ಯತೆ ಮೇರೆಗೆ ಈ ಕಾಮಗಾರಿಯನ್ನು ಸೇರಿಸಲಾಗುವುದು/ಕೈಗೊಳ್ಳಲಾಗುವುದು ಎಂದು ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಉಡುಪಿ ವಿಭಾಗ ಇವರು ಸಭೆಗೆ ತಿಳಿಸಿದರು.

5 **ಸಮಸ್ಯೆ:** ಶಿರ್ವ ವ್ಯಾಪ್ತಿಯಲ್ಲಿ ವಿದ್ಯುತ್ ಮಾಪಕಗಳನ್ನು ಬದಲಾವಣೆ ಮಾಡುತ್ತಿದ್ದು, ಇದಕ್ಕೆ ವಿವರಣೆಯನ್ನು ನೀಡುವಂತೆ ಕೆ ಆರ್ ಪಾಟ್ಕರ್ ಸಭೆಯಲ್ಲಿ ಕೋರಿರುತ್ತಾರೆ.

**ಕ್ರಮ:** ಎಲ್ಲಾ ಹಳೆಯ ಮೆಕ್ಯಾನಿಕಲ್ ಮಾಪಕಗಳನ್ನು ಸ್ಟಾಟಿಕ್ ಮಾಪಕಗಳಿಂದ ಬದಲಾವಣೆ ಮಾಡುವಂತೆ ಆಡಳಿತ ಕಛೇರಿಯಿಂದ ನಿರ್ದೇಶನ ಇರುವುದರಿಂದ ಎಲ್ಲಾ ಉಪವಿಭಾಗ ವ್ಯಾಪ್ತಿಯಲ್ಲಿ ಬದಲಾವಣೆ ಮಾಡಲಾಗುತ್ತಿದೆ ಎಂದು ತಿಳಿಸಲಾಯಿತು ಹಾಗೂ ಮೆಕ್ಯಾನಿಕಲ್ ಮಾಪಕಗಳಿಗಿಂತ ಸ್ಟಾಟಿಕ್ ಮಾಪಕಗಳ Consumption Accuracy ಉತ್ತಮವಾಗಿರುತ್ತದೆ ಎಂದು ತಿಳಿಸಲಾಯಿತು.

6 **ಸಮಸ್ಯೆ:** ಶಿರ್ವ ಶಾಖೆಯಲ್ಲಿ ಮಾರ್ಗದಾಳುಗಳ ಸಂಖ್ಯೆ ಕಡಿಮೆ ಇದ್ದು ಹೆಚ್ಚುವರಿ ಸಿಬ್ಬಂದಿ ನಿಯೋಜಿಸುವಂತೆ ಕೆ ಆರ್ ಪಾಟ್ಕರ್ ಇವರು ಕೋರಿರುತ್ತಾರೆ.

**ಕ್ರಮ:** ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು.

7 **ಸಮಸ್ಯೆ:** ಶಿರ್ವ ವ್ಯಾಪ್ತಿಯ ತ್ಯಾಜ್ಯ ವಿಲೇವಾರಿ ಘಟಕದ ಹತ್ತಿರ ವಿದ್ಯುತ್ ಕಂಬ ವಾಲಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಕೆ ಆರ್ ಪಾಟ್ಕರ್ ಇವರು ಸಭೆಗೆ ತಿಳಿಸಿರುತ್ತಾರೆ.

**ಕ್ರಮ:** ಶಿರ್ವ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಂಡು ಈ ಕಛೇರಿಗೆ ವರದಿ ನೀಡಲು ಸೂಚಿಸಲಾಯಿತು.

8 **ಸಮಸ್ಯೆ:** ಶಿರ್ವ ವ್ಯಾಪ್ತಿಯ ಬಿ.ಸಿ. ರೋಡಿನಿಂದ ಸೋದೆಮಠದವರೆಗೆ ತುಂಬಾ ಹಳೆಯ ವಿದ್ಯುತ್ ತಂತಿಗಳು ಇದ್ದು, ಅದನ್ನು ಬದಲಾಯಿಸುವಂತೆ ಬಿ. ಪುಂಡಲೀಕ ಮರಾಠೆ, ಬಂಟಕಲ್ಲು ಇವರು ಸಭೆಗೆ ತಿಳಿಸಿರುತ್ತಾರೆ.

**ಕ್ರಮ:** ಮುಂದಿನ ಕ್ರಿಯಾ ಯೋಜನೆಯಲ್ಲಿ ಆದ್ಯತೆ ಮೇರೆಗೆ ಈ ಕಾಮಗಾರಿಯನ್ನು ಸೇರಿಸಲಾಗುವುದು/ಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು.

9 **ಸಮಸ್ಯೆ:** ಪಂಜಿಮಾರು ಶಾಲೆಯ ಹತ್ತಿರ ಹಾಗೂ ದಿಂದೊಟ್ಟು ಹತ್ತಿರ ವಿದ್ಯುತ್ ತಂತಿಗಳು ತುಂಬಾ ಜೋತು ಬಿದಿದ್ದು, ತಂತಿಗಳು ಕೈಗೆ ಸಿಗುವ ಹಾಗಿದ್ದು ಕೂಡಲೇ ಸರಿಪಡಿಸುವಂತೆ ಕೆ ಆರ್ ಪಾಟ್ಕರ್ ಇವರು ಸಭೆಗೆ ತಿಳಿಸಿರುತ್ತಾರೆ.

**ಕ್ರಮ:** ಶಿರ್ವ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಂಡು ಈ ಕಛೇರಿಗೆ ವರದಿ ನೀಡಲು ಸೂಚಿಸಲಾಯಿತು.

10 **ಸಮಸ್ಯೆ:** ಶ್ರೀ ನಾರಾಯಣ ಆಚಾರ್ಯ ಇವರು ಶಿರ್ವ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಂಟಕಲ್ಲು ನಿವಾಸಿಯಾಗಿದ್ದು (ಮನೆ ನಂಬ್ರ 1-122) ಇವರ ಮನೆಯ ವಿದ್ಯುತ್ ಮಾಪಕ (ಸ್ಥಾವರ ಸಂಖ್ಯೆ ಕೆಪಿಎಸ್ಆರ್ 23504) ದೋಷಪೂರಿತ ವಾಗಿದ್ದು ಸ್ಥಗಿತಗೊಂಡಿರುತ್ತದೆ ಮಾಪಕವನ್ನು ಬದಲಾಯಿಸುವಂತೆ ಹಾಗೂ ವಾಸವಿದ್ದ ಮನೆಯ ದುರಸ್ತಿ ಕಾರ್ಯ ನಡೆಯುತ್ತಿರುವುದರಿಂದ ದಿನಾಂಕ 15.03.2023 ರಿಂದ 30.05.2023 ರವರೆಗೆ ಸದರಿ ಮನೆಯಲ್ಲಿ ವಾಸ್ತವ್ಯ ಇಲ್ಲದಿರುವ ಕಾರಣ ಕನಿಷ್ಠ ದರದಲ್ಲಿ ಬಿಲ್ ನೀಡುವಂತೆ ಕೋರಿರುತ್ತಾರೆ.

**ಕ್ರಮ:** ಶಿರ್ವ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಂಡು ಈ ಕಛೇರಿಗೆ ವರದಿ ನೀಡಲು ಸೂಚಿಸಲಾಯಿತು.

**ವಂದನೆಗಳೊಂದಿಗೆ ಸಭೆ ಮುಕ್ತಾಯಗೊಂಡಿತು.**

**ಶ್ರೀ ಸುಷನ್ ಬಿ.ಸಿ.**
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ.),
ಮೆಸ್ಕಾಂ (ನಿ), ಕಾರ್ಯ ಮತ್ತು ಪಾಲನೆ ಉಪವಿಭಾಗ, ಕಾಪು.

***ಯಥಾಪ್ರತಿಗಳು:***

1) ಅಧೀಕ್ಷಕ ಇಂಜಿನಿಯರ್ (ವಿ.), ಕಾರ್ಯ ಮತ್ತು ಪಾಲನೆ ವೃತ್ತ, ಉಡುಪಿ ಇವರ ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2) ಕಾರ್ಯನಿರ್ವಾಹಕ ಇಂಜಿನಿಯರ್ (ವಿ.), ಕಾರ್ಯ ಮತ್ತು ಪಾಲನೆ ವಿಭಾಗ, ಉಡುಪಿ ಇವರ ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3) ಎಲ್ಲಾ ಶಾಖಾಧಿಕಾರಿಗಳು, ಕಾಪು ಉಪ ವಿಭಾಗ ಇವರ ಮಾಹಿತಿಗಾಗಿ ಮತ್ತು ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ಸೂಕ್ತ ಕ್ರಮಕೈಗೊಳ್ಳುವುದು.

ಕಛೇರಿ ಪ್ರತಿ

ಮೆಸ್ಕಾಂ
MESCOM
# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ.
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ),ಕಾರ್ಯ& ಪಾಲನೆ ಉಪವಿಭಾಗ, ಮಣಿಪಾಲ
*E-Mail: aeemanipal@ rediffmail.com Phone No. 9448998727, 0820-2573699*

ಕ್ರಮಾಂಕ: ಸ.ಕಾ.ನಿ.ಇಂ(ವಿ)/ಮ.ಉ.ವಿ/ಸ.ಇಂ(ವಿ) : 5281-84 ದಿನಾಂಕ: 13 SEP 2023

<u>ದಿನಾಂಕ 16.08.2023 ರಂದು ಶ್ರೀ ದಿನೇಶ ಉಪಾಧ್ಯಾಯ, ಅಧೀಕ್ಷಕ ಇಂಜಿನಿಯರ್(ವಿ), ಮ.ವಿ.ಸ.ಕಂ, ಉಡುಪಿ ವೃತ್ತ ರವರ ಅಧ್ಯಕ್ಷತೆಯಲ್ಲಿ ಹಾಗೂ ಉಪ-ನಿಯಂತ್ರಣಾಧಿಕಾರಿ ಶ್ರೀ ರಮೇಶ್ ರವರ ಉಪಸ್ಥಿತಿಯಲ್ಲಿ ಮಣಿಪಾಲ ಉಪ-ವಿಭಾಗದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿ.</u>

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು**

1. ಶ್ರೀ ಪ್ರಶಾಂತ್ ಪುತ್ರನ್ ಎಸ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
2. ಶ್ರೀಮತಿ, ನಯನ ಎಂ.ಟಿ : ಸಹಾಯಕ ಇಂಜಿನಿಯರ್ (ವಿ) (ತಾಂತ್ರಿಕ)
3. ಶ್ರೀ ಸಂತೋಷ. ಸಿ : ಹಿರಿಯ ಸಹಾಯಕ ಮಣಿಪಾಲ ಉಪವಿಭಾಗ
4. ಶ್ರೀ ಶ್ರೀಧರ್ ಪಿ.ಎಸ್ : ಸಹಾಯಕ ಇಂಜಿನಿಯರ್(ವಿ) ಮಣಿಪಾಲ ಶಾಖೆ
5. ಶ್ರೀ ಸುಕೇಶ್ : ಶಾಖಾಧಿಕಾರಿ ಪರ್ಕಳ ಶಾಖೆ
6. ಶ್ರೀ ಶಂಕರ್ : ಶಾಖಾಧಿಕಾರಿ ಅಲೆವೂರು ಶಾಖೆ
7. ಶ್ರೀ ಬಾಲಕೃಷ್ಣ : ಶಾಖಾಧಿಕಾರಿ ಪೆರ್ಡೂರು ಶಾಖೆ

ಸಂಖ್ಯೆ: 5604
ದಿನಾಂಕ: 14 SEP 2023
ಸ.ಕಾ.ನಿ.ಇಂಜಿನಿಯರ್ (ವಿ) ಮ.ವಿ.ಸ.ಕಂ, ಉಡುಪಿ

ಸ. ಕಾ. ವಿ. ಇ. (ಕ) ಲೆಕ್ಕಾಧಿಕಾರಿ
ಸ. ಇ. I — ಸ. ಲೆಕ್ಕ ಅಧಿಕಾರಿ
ಸ.ಇ. II
ಸ.ಇ. III — ಹಿ. ಸ. (ಸ)
ಕಿ. ಇ. — ಮುಖ್ಯ ಗುಮಾಸ್ತ
ಸ.ಇಂ. (ಸಿವಿಲ್) — ಕ. ಆ. ಸ.
ಕಾ. ನಿ. ಇಂಜಿನಿಯರ್

**<u>ಸಭೆಯ ನಡಾವಳಿ</u>** :

ಸಭೆಗೆ ಹಾಜರಾದ ಅಧಿಕಾರಿ/ ನೌಕರರನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಮಣಿಪಾಲ ಉಪ-ವಿಭಾಗ ರವರು ಸ್ವಾಗತಿಸಿದರು. ಸಭೆಯಲ್ಲಿ ಈ ಕೆಳಕಂಡ ದೂರುಗಳು ದಾಖಲಾದವು-

1. ಪೆರ್ಡೂರು ಶಾಖೆಯ ಗ್ರಾಹಕರಾದ ಶ್ರೀ ರಕ್ಷಿತ್ ಶೆಟ್ಟಿ ರವರು ಪುಷ್ಪಲತಾ ನಾಯಕ್ ರವರ ವಿದ್ಯುತ್ ಸ್ಥಾವರಕ್ಕೆ ಕಾರ್ಯಾದೇಶ ನೀಡದಿರುವ ಬಗ್ಗೆ ತಿಳಿಸಿರುತ್ತಾರೆ.

ಸದರಿ ಅರ್ಜಿಗೆ ಅಂದಾಜುಪಟ್ಟಿ ತಯಾರಿಸಿ ಈ ಕಛೇರಿ ಪತ್ರ ಸಂಖ್ಯೆ 2876 ದಿನಾಂಕ 03.07.2023 ರಂದು ವಿಭಾಗೀಯ ಕಛೇರಿಗೆ ಕಾರ್ಯಾದೇಶಕ್ಕಾಗಿ ಸಲ್ಲಿಸಿರುವುದಾಗಿ ಸದರಿಯವರಿಗೆ ಸಭೆಯಲ್ಲಿ

JPB
18/9

ತಿಳಿಸಲಾಯಿತು. ಹಾಗೂ ಈ ಕುರಿತು ಕ್ರಮಕೈಗೊಳ್ಳುವುದಾಗಿ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ಇವರು ಗ್ರಾಹಕರಿಗೆ ತಿಳಿಸಿದರು.

2. ಮಣಿಪಾಲ ಶಾಖೆಯ ಗ್ರಾಹಕರಾದ ಶ್ರೀ ಕೆ.ಮೋಹನ್ ನಾಯಕ್ ರವರು ತಮ್ಮ ಫ್ಲಾಟಿನ ಮಾಸಿಕ ವಿದ್ಯುತ್ ಬಿಲ್ಲನ್ನು ಸರಿಯಾಗಿ ನೀಡುತ್ತಿಲ್ಲವೆಂದು ತಿಳಿಸಿರುತ್ತಾರೆ.

ಮಾಪಕ ಓದುಗರು ಸದರಿಯವರ ಫ್ಲಾಟಿನ ಮಾಸಿಕ ಬಿಲ್ಲನ್ನು ಸದರಿ ಅಪಾರ್ಟ್‌ಮೆಂಟಿನ ಸೆಕ್ಯೂರಿಟಿ ಗಾರ್ಡಿಗೆ ನೀಡಿತ್ತಿರುವುದಾಗಿ ಹಿರಿಯ ಸಹಾಯಕರು ಸಭೆಯಲ್ಲಿ ತಿಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ನಿರ್ವಹಣೆ ಮತ್ತು ಪಾಲನೆ, ಉಪವಿಭಾಗ,
ಮೆಸ್ಕಾಂ ನಿಯಮಿತ ಮಣಿಪಾಲ.

<u>ಪ್ರತಿಗಳನ್ನು:</u>

1. ವ್ಯವಸ್ಥಾಪಕರು (ಸಾ.ದೂ ವಿಭಾಗ), ಮ.ವಿ.ಸ.ಕಂ ಕಾರ್ಪೋರೇಟ್ ಕಛೇರಿ, ಮೆಸ್ಕಾಂ ಭವನ, ಕಾವೂರು ಕ್ರಾಸ್ ರೋಡ್, ಬಿಜೈ ಮಂಗಳೂರು-575004 ರವರ ದಯಾಪರ ಅವಗಾಹನೆಗಾಗಿ.
2. ಅಧೀಕ್ಷಕ ಇಂಜಿನಿಯರ್ (ವಿ), ಪಾಲನೆ ಮತ್ತು ನಿರ್ವಹಣೆ ವೃತ್ತ, ಕುಂಜಿಬೆಟ್ಟು ಉಡುಪಿ ರವರ ದಯಾಪರ ಅವಗಾಹನೆಗಾಗಿ.
3. ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಮೆಸ್ಕಾಂ, ಉಡುಪಿ ವಿಭಾಗ, ಉಡುಪಿ ರವರ ದಯಾಪರ ಅವಗಾಹನೆಗಾಗಿ.
4. ಸಹಾಯಕ ಲೆಕ್ಕಾಧಿಕಾರಿ ಕಂದಾಯ/ ಹಿರಿಯ ಸಹಾಯಕರು, ಕಂದಾಯ ಶಾಖೆ ಮಣಿಪಾಲ ಉಪವಿಭಾಗ
5. ಕಛೇರಿ ಪ್ರತಿ.

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ

(ಕರ್ನಾಟಕ ಸರಕಾರದ ಆಡಳಿತಕ್ಕೆ ಒಳಪಟ್ಟಿದೆ)

ಆಂತರಿಕ ಕಛೇರಿ ಪತ್ರ

ಮೆಸ್ಕಾಂ MESCOM

| | |
|---|---|
| ಇವರಿಂದ,<br>ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),<br>ಪಾಲನೆ ಮತ್ತು ನಿರ್ವಹಣೆ,<br>ಉಡುಪಿ ಉಪವಿಭಾಗ, ಮ.ವಿ.ಸ.ಕಂ, ಉಡುಪಿ. | ಇವರಿಗೆ,<br>ಅಧೀಕ್ಷಕ ಇಂಜಿನಿಯರ್(ವಿ),<br>ಕಾರ್ಯ ಮತ್ತು ಪಾಲನಾ ವೃತ್ತ,<br>ಮ.ವಿ.ಸ.ಕಂ, ಎಂ.ಜಿ.ಎಂ ಗ್ರೌಂಡ್ ಹತ್ತಿರ,<br>ಕುಂಜಿಬೆಟ್ಟು, ಉಡುಪಿ – 576 102 |

ಸಂಖ್ಯೆ : ಸ.ಕಾ.ನಿ/ಉ.ಉ.ವಿ/ಸ.ಇಂ.(ತಾಂ)/ 4925-26 ದಿನಾಂಕ: 16 AUG 2023

ಲಗತ್ತು :

## ದಿನಾಂಕ: 11.08.2023 ರಂದು ಉಡುಪಿ ಉಪವಿಭಾಗದ ಕಛೇರಿಯಲ್ಲಿ ಜರುಗಿದ ಜನ ಸಂಪರ್ಕ ಸಭೆಯ ನಡಾವಳಿ.

ಅಧ್ಯಕ್ಷತೆ: ಶ್ರೀ ಕೆ.ಪ್ರಸನ್ನ ಕುಮಾರ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಪಾಲನೆ ಮತ್ತು ನಿರ್ವಹಣೆ, ಉಡುಪಿ ವಿಭಾಗ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:-

| | | |
|---|---|---|
| 1. ಶ್ರೀ ಎಸ್.ಗಣರಾಜ್ ಭಟ್ | : | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಉಡುಪಿ ಉಪವಿಭಾಗ. |
| 2. ಶ್ರೀಮತಿ ಸ್ಮಿತಾಕ್ಲೇರಾ ಡಿಸೋಜಾ | : | ಸಹಾಯಕ ಇಂಜಿನಿಯರ್(ತಾಂತ್ರಿಕ)(ಪ್ರಭಾರ), ಉಡುಪಿ ಉಪವಿಭಾಗ. |
| 3. ಶ್ರೀ ಜಿ.ಪಿ.ರಾಜೇಶ್ | : | ಸಹಾಯಕ ಇಂಜಿನಿಯರ್(ವಿ),ಘಟಕ-1, ಉಡುಪಿ. |
| 4. ಶ್ರೀ ಅವಿನಾಶ್ | : | ಸಹಾಯಕ ಇಂಜಿನಿಯರ್(ವಿ),ಘಟಕ-2, ಉಡುಪಿ |
| 5. ಶ್ರೀ ಮೃತ್ಯುಂಜಯ ರಿತ್ತಿಮಠ | : | ಶಾಖಾಧಿಕಾರಿ, ಪುತ್ತೂರು ಶಾಖೆ. |
| 6. ಶ್ರೀ ಕೃಷ್ಣಮೂರ್ತಿ | : | ಶಾಖಾಧಿಕಾರಿ, ಮಲ್ಪೆ ಶಾಖೆ. |
| 7. ಶ್ರೀ ಅಶೋಕ್ ಶೆಟ್ಟಿ | : | ಶಾಖಾಧಿಕಾರಿ, ಕುಂಜಿಬೆಟ್ಟು. |
| 8. ಶ್ರೀ ಶ್ರೀಧರ ಗುರವ | : | ಶಾಖಾಧಿಕಾರಿ, ಉದ್ಯಾವರ ಶಾಖೆ. |

ಶ್ರೀ ಕೆ.ಪ್ರಸನ್ನ ಕುಮಾರ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಉಡುಪಿ ಇವರು ಅಧ್ಯಕ್ಷತೆಯನ್ನು ವಹಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸ್ವಾಗತಿಸಿ ಸಭೆಯನ್ನು ಚಾಲನೆಗೊಳಿಸಿದರು.

ಸಭೆಯಲ್ಲಿ ಅಹವಾಲು ನೀಡಲು ಯಾವುದೇ ಗ್ರಾಹಕರು ಭಾಗವಹಿಸಿರುವುದಿಲ್ಲ. ಆದುದರಿಂದ ಉಡುಪಿ ಉಪವಿಭಾಗದ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಲಾಯಿತು.

ಸಭೆಗೆ ಹಾಜರಾದ ಎಲ್ಲರಿಗೂ ಧನ್ಯವಾದಗಳನ್ನು ಹೇಳಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎಸ್.ಗಣರಾಜ ಭಟ್),
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ನಿರ್ವಹಣೆ ಮತ್ತು ಪಾಲನೆ, ಉಡುಪಿ ಉಪವಿಭಾಗ,
ಮ.ವಿ.ಸ.ಕಂ, ಉಡುಪಿ.

ಪ್ರತಿ:- ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಉಡುಪಿ ವಿಭಾಗ, ಮ.ವಿ.ಸ.ಕಂ, ಉಡುಪಿರವರಿಗೆ.

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ

(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನೋಂದಾಯಿತ ಕಛೇರಿ: ಕಾರ್ಪೋರೇಟ್ ಕಛೇರಿ,
"ಮೆಸ್ಕಾಂ ಭವನ" ಕಾವೂರು ಅಡ್ಡರಸ್ತೆ,
ಬಿಜೈ, ಮಂಗಳೂರು-575004
CIN:U40109 KA 2002 SGC 030425
ವೆಬ್‌ಸೈಟ್: www.mescom.karnataka.gov.in

MESCOM

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯಮತ್ತು ಪಾಲನಾ ಉಪವಿಭಾಗ,
ಕುಂದಾಪುರ-576201
Email:aeekdpr@rediffmail.com
Phone: 08254 230490


ಕ್ರಮಾಂಕ: ಸ.ಕಾ.ನಿ.ಇಂ(ವಿ)/ಕುಂ/ಸ.ಇಂ(ತಾ)/ 5286 - 89 ದಿನಾಂಕ: 12 · 10 - 23

ದಿನಾಂಕ 26.09.2023 ರಂದು ಬೆಳಗ್ಗೆ 10.30 ಗಂಟೆಗೆ ಕುಂದಾಪುರ ಉಪವಿಭಾಗ ಕಛೇರಿಯಲ್ಲಿ ಜರುಗಿದ ಜನಸಂಪರ್ಕ ಸಭೆಯ ನಡಾವಳಿಗಳು

ಅಧ್ಯಕ್ಷತೆ : ಶ್ರೀ ದಿನೇಶ್ ಉಪಾಧ್ಯ, ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಉಡುಪಿ.

ಹಾಜರಿದ್ದ ಅಧಿಕಾರಿಗಳು :

1. ಶ್ರೀ ರಾಕೇಶ್ ಬಿ., ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಮೆಸ್ಕಾಂ ಕುಂದಾಪುರ ವಿಭಾಗ.
2. ಶ್ರೀ ರಮೇಶ, ಡಿ.ಸಿ.ಎ., ಕಾರ್ಯ ಮತ್ತು ಪಾಲನಾ ವೃತ್ತ, ಉಡುಪಿ.
3. ಶ್ರೀ ವಿಜಯ ಕುಮಾರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮೆಸ್ಕಾಂ ಕುಂದಾಪುರ.
4. ಶ್ರೀ ಸುಧಾಕರ ಪೂಜಾರಿ., ಸಹಾಯಕ ಇಂಜಿನಿಯರ್(ತಾಂ), ಮೆಸ್ಕಾಂ ಕುಂದಾಪುರ.
5. ಶ್ರೀಮತಿ ವಸಂತಿ., ಸಹಾಯಕ ಲೆಕ್ಕಾಧಿಕಾರಿ(ಪ್ರಭಾರ), ಕುಂದಾಪುರ ಉಪವಿಭಾಗ.
6. ಶ್ರೀ ರಾಘವೇಂದ್ರ ಎಮ್., ಸಹಾಯಕ ಇಂಜಿನಿಯರ್(ವಿ), ಓ & ಎಂ-1 ಶಾಖೆ.
7. ಶ್ರೀ ರಾಘವೇಂದ್ರ ಎನ್., ಕಿರಿಯ ಇಂಜಿನಿಯರ್(ವಿ), ಓ & ಎಂ-2 ಶಾಖೆ.
8. ಶ್ರೀ ಸುನೀಲ್ ಆರ್., ಕಿರಿಯ ಇಂಜಿನಿಯರ್(ವಿ), ಗೋಪಾಡಿ ಶಾಖೆ.

ಹಾಜರಾದವರು :

1. ಶ್ರೀ ಕೆ. ದಿವಾಕರ ಶೆಟ್ಟಿ, ಗ್ರಾಮ ಪಂಚಾಯತ್ ಸದಸ್ಯರು, ಕೋಣಿ
2. ಶ್ರೀ ಗಣಪತಿ ಪುರುಷೋತ್ತಮ ಶೇಟ್, ಗ್ರಾಮ ಪಂಚಾಯತ್ ಸದಸ್ಯರು, ಕೋಣಿ
3. ಶ್ರೀ ವಾಸುದೇವ
4. ಶ್ರೀ ಬಿ. ರಾಮ ನಾಯ್ಕ
5. ಶ್ರೀ ವಿಜಯ ಪೂಜಾರಿ
6. ಶ್ರೀ ರಾಜೇಶ್ ಕೆ.
7. ಶ್ರೀ ರವೀಂದ್ರ ಶೇಟ್
8. ಹೆಚ್. ರವೀಂದ್ರ ಎನ್. ಪೈ
9. ಶ್ರೀ ಗಿರೀಶ್ ಎಸ್. ಖಾರ್ವಿ
10. ಶ್ರೀ ರಾಜು ಪೂಜಾರಿ
11. ಶ್ರೀ ಅಶೋಕ ಪೂಜಾರಿ

...2

Scanned with CamScanner

12. ಶ್ರೀ ತಿಯೋದರ್ ಡಿ'ಮೆಲ್ಲೋ

13. ಶ್ರೀ ಬಾಲಕೃಷ್ಣ ಶೆಟ್ಟಿ

14. ಶ್ರೀ ವೆಂಕಟೇಶ ಕುಮಾರ, ಬೀಜಾಡಿ

15. ಶ್ರೀ ಮಾರ್ಕ್ ಡಿ'ಸೋಜ, ಕುಂದಾಪುರ

16. ಶ್ರೀ ಹೆಚ್. ಲಕ್ಷ್ಮಣ ಕೊಠಾರಿ, ಜಪ್ತಿ

17. ಶ್ರೀ ಜಯಸುದರ್ಶನ

18. ಶ್ರೀ ಜಯಾನಂದ, ಬಿದ್ಕಲ್‌ಕಟ್ಟೆ

19. ಶ್ರೀ ಶ್ರೀನಿವಾಸ, ಬಿನ್. ನಾರಾಯಣ, ಶಾಲೆ ರಸ್ತೆ, ಕೋಣಿ

20. ಶ್ರೀ ಅರವಿಂದ ಭಟ್

ಸಭೆಗೆ ಹಾಜರಾದ ಎಲ್ಲರನ್ನೂ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ವಾಗತಿಸಿದರು ಹಾಗೂ ಸಭೆಯಲ್ಲಿ ಈ ಕೆಳಗೆ ತಿಳಿಸಿರುವ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

1. ಕೋಣಿ ಪಂಚಾಯತ್ ವ್ಯಾಪ್ತಿಯಲ್ಲಿ ವಿದ್ಯುತ್ ಅಡಚಣೆ ಇರುವುದಾಗಿ ತಿಳಿಸಿದ್ದು, ಸಮಸ್ಯೆಯನ್ನು ಕೂಡಲೇ ಸರಿಪಡಿಸುವಂತೆ ಶ್ರೀ ಗಣಪತಿ ಶೇಟ್ ರವರು ಮನವಿ ಮಾಡಿದರು. ಈ ಬಗ್ಗೆ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು. ಮಳೆಗಾಲದ ಅವಧಿಯಲ್ಲಿ 11 ಕೆವಿ ಜಪ್ತಿ ಫೀಡರ್‌ನಲ್ಲಿ ಹೆಚ್ಚಾಗಿ ವಿದ್ಯುತ್ ವ್ಯತ್ಯಯವಾಗಿದ್ದು, ಈಗ ವಿದ್ಯುತ್ ಅಡಚಣೆಯು ಗಣನೀಯವಾಗಿ ಕಡಿಮೆಯಾಗಿರುತ್ತದೆ ಎಂದು ಶಾಖಾಧಿಕಾರಿ, ಗೋಪಾಡಿ ರವರು ತಿಳಿಸಿದರು.
2. ಶ್ರೀ ವಿಜಯ ಪೂಜಾರಿರವರು ಕೋಣಿ ಮಲ್ಲನಬೆಟ್ಟು ಪರಿಸರದಲ್ಲಿ ಲೋ-ವೋಲ್ಟೇಜ್ ಸಮಸ್ಯೆ ಇದ್ದು, ಕೂಡಲೇ ಸರಿಪಡಿಸುವಂತೆ ಕೋರಿ ಮನವಿಯನ್ನು ನೀಡಿದರು. ಈ ಬಗ್ಗೆ ಈಗಾಗಲೇ ಸ್ಥಳ ಪರಿಶೀಲಿಸಲಾಗಿದ್ದು, ಪರಿವರ್ತಕ ಅಳವಡಿಸಲು ಸೂಕ್ತ ಸ್ಥಳಾವಕಾಶ ಇರುವುದಿಲ್ಲವೆಂದು ಶಾಖಾಧಿಕಾರಿ, ಓ & ಎಂ-2 ರವರು ತಿಳಿಸಿದರು. ಕೋಣಿ ಪಂಚಾಯತ್‌ನವರು ಪರಿವರ್ತಕ ಅಳವಡಿಸಲು ಸ್ಥಳ ನೀಡುವುದಾಗಿ ತಿಳಿಸಿದ್ದು, ಸದರಿ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಇವರು ಸೂಚಿಸಿದರು.
3. ಕೋಣಿ ಶಾಲಾ ಆವರಣದ ಒಳಗಿರುವ ಕಂಬವನ್ನು ಆವರಣದ ಹೊರಗಡೆ ಸ್ಥಳಾಂತರಿಸುವ ಬಗ್ಗೆ ಸೂಕ್ತ ಸಹಕಾರ ನೀಡುವಂತೆ ಕೋಣಿ ಗ್ರಾಮ ಪಂಚಾಯತ್ ಸದಸ್ಯರಲ್ಲಿ ಮನವಿ ಮಾಡಲಾಯಿತು.
4. ಕೋಣಿ ಶಾಲಾ ಆವರಣದ ಒಳಗಿರುವ ಕಂಬವನ್ನು ಆವರಣದ ಹೊರಗಡೆ ಸ್ಥಳಾಂತರಿಸುವ ಬಗ್ಗೆ ಈ ಹಿಂದೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಕ್ರಮ ಜರುಗಿಸಿಲ್ಲವೆಂದು ಶ್ರೀ ಶ್ರೀನಿವಾಸ ರವರು ತಿಳಿಸಿದರು. ಈ ಬಗ್ಗೆ ಬಹಳಷ್ಟು ಬಾರಿ ಪ್ರಯತ್ನಿಸಿದ್ದು, ಕಂಬ ಸ್ಥಳಾಂತರಿಸಲು ಸಾಧ್ಯವಾಗಿರುವುದಿಲ್ಲ. ಶಾಲೆಯ ಆವರಣದ ಹೊರಗಡೆ ಇರುವ ಕಿರಿದಾದ ದಾರಿಯಲ್ಲಿ ಕಂಬ ಅಳವಡಿಸಬಾರದೆಂದು ಅಲ್ಲಿಯ ನಿವಾಸಿಗಳು ಆಕ್ಷೇಪ ವ್ಯಕ್ತಪಡಿಸಿದ್ದರು. ಈಗ ಶಾಲೆಯ ಆವರಣದ ಹೊರಗಿನ ಸ್ಥಳವು ಶಾಲೆಗೆ ಸಂಬಂಧಪಟ್ಟ ಸ್ಥಳವಾಗಿರುತ್ತದೆಯೆಂದು ಶಾಲಾಭಿವೃದ್ಧಿ ಸಮಿತಿಯವರು ತಿಳಿಸಿದ್ದು, ಕಂಬವನ್ನು ಹೊರಗಡೆ ಸ್ಥಳಾಂತರಿಸುವ ಬಗ್ಗೆ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಲಾಯಿತು.
5. ಶ್ರೀ ಆಶಾ, ಕೋಂ. ನವೀನ, ರವರು ತಮ್ಮ ಬಿ. ಸಿ ರಸ್ತೆ, ವಡೇರಹೋಬಳಿಯಲ್ಲಿರುವ ಜಾಗದ ಮಧ್ಯದಲ್ಲಿ ಹಾಕಿರುವ ಕಂಬವನ್ನು ತೆರವುಗೊಳಿಸುವಂತೆ ಮನವಿ ನೀಡಿದರು. ಈ ಬಗ್ಗೆ ಸ್ಥಳ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿ, ಓ & ಎಂ-1 ಶಾಖೆ ರವರಿಗೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು.

...3

Scanned with CamScanner

6. ಶ್ರೀ ಲಕ್ಷ್ಮಣ ಕೊಠಾರಿಯವರು ಜಪ್ತಿ ಕರಿಕಲ್‌ಕಟ್ಟೆಯಲ್ಲಿರುವ ತಮ್ಮ ಮನೆಯ ಹತ್ತಿರದ ವಿದ್ಯುತ್ ಮಾರ್ಗದ ಮೇಲೆ ಇರುವ ಎರಡು ಮರಗಳನ್ನು ತೆರವುಗೊಳಿಸುವಂತೆ ಕೋರಿ ಮನವಿ ನೀಡಿದರು. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿ, ಓ & ಎಂ-2 ಇವರಿಗೆ ಸೂಚಿಸಲಾಯಿತು.

7. ಹೊಸ ಮಾಪಕಗಳಲ್ಲಿ ಅನೇಕ ದೋಷಗಳಿರುವುದಾಗಿ ಶ್ರೀ ರವೀಂದ್ರ ಪೈ ರವರು ತಿಳಿಸಿದರು. ಈ ಬಗ್ಗೆ ಮಾಪಕ ಕಂಪೆನಿಯ ಪ್ರತಿನಿಧಿಗಳ ಗಮನಕ್ಕೆ ಈಗಾಗಲೇ ತಂದಿದ್ದು, ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು.

8. ಕಟ್ಕೇರಿಬೈಲ್‌ನಲ್ಲಿ ವಿದ್ಯುತ್ ತಂತಿಗಳು ಕೆಳಗಡೆ ನೇತಾಡುತ್ತಿರುವುದಾಗಿ ಶ್ರೀ ದಿವಾಕರ ಶೆಟ್ಟಿ ಇವರು ತಿಳಿಸಿದರು. ಈ ಬಗ್ಗೆ ಶಾಖಾಧಿಕಾರಿ, ಗೋಪಾಡಿ ರವರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು.

9. ಗೋಪಾಡಿ ಶಾಖೆಯಲ್ಲಿ ಹೆಚ್.ಟಿ ಮಾರ್ಗ ಸ್ಥಳಾಂತರಕ್ಕೆ ಅನುಮೋದನೆ ನೀಡುವಂತೆ ಶ್ರೀ ಗಣಪತಿ ಶೇಟ್ ರವರು ಕೋರಿದರು. ಈ ಬಗ್ಗೆ ಅಂದಾಜುಪಟ್ಟಿಯನ್ನು ಪರಿಷ್ಕರಿಸಿ, ಸಲ್ಲಿಸುವಂತೆ ಶಾಖಾಧಿಕಾರಿ, ಗೋಪಾಡಿ ರವರಿಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸೂಚಿಸಿದರು.

10. ತೆಕ್ಕಟ್ಟೆ ಪರಿಸರಕ್ಕೆ ಕುಂದಾಪುರ ಉಪಸ್ಥಾವರದಿಂದ ವಿದ್ಯುತ್ ಸರಬರಾಜಾಗುತ್ತಿದ್ದು, ಲೋ-ವೋಲ್ಟೇಜ್ ಸಮಸ್ಯೆ ಇರುತ್ತದೆ. ಆದ್ದರಿಂದ ನಮಗೆ ಕೋಟ ಉಪಸ್ಥಾವರದ ಕೋಟ ಮಾರ್ಗದಿಂದ ವಿದ್ಯುತ್ ಸರಬರಾಜು ಮಾಡುವಂತೆ ಶ್ರೀ ಅರವಿಂದ ಭಟ್, ಕಲ್ಮಕ್ಕಿಬೆಟ್ಟು ರವರು ಕೋರಿದರು. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿ, ಗೋಪಾಡಿರವರಿಗೆ ಸೂಚಿಸಲಾಯಿತು.

11. ಶ್ರೀ ವಾಸುದೇವ ರವರು ಮಾತನಾಡಿ ಗ್ರಾಹಕರ ಖಾತೆಯನ್ನು ಬದಲಾಯಿಸುವ ಬಗ್ಗೆ ನಿಯಮದಲ್ಲಿ ಸರಳೀಕರಣ ಮಾಡುವಂತೆ ಕೋರಿದರು. ಕಂಪೆನಿಯ ನಿಯಮಾನುಸಾರ ಗ್ರಾಹಕರ ಖಾತೆ ಬದಲಾವಣೆಯ ಕೆಲಸವನ್ನು ನಿರ್ವಹಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ ಸಹಾಯಕ ಲೆಕ್ಕಾಧಿಕಾರಿ ರವರಿಗೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು.

ಕೊನೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ವಂದನಾರ್ಪಣೆಯನ್ನು ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ವಿಜಯಕುಮಾರ್)
**ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ),**
**ಕಾರ್ಯ ಮತ್ತು ಪಾಲನಾ ಉಪ ವಿಭಾಗ**
**ಮ.ವಿ.ಸ.ಕಂ.ನಿ - ಕುಂದಾಪುರ**

ಪ್ರತಿಗಳು:

1) ಅಧೀಕ್ಷಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವೃತ್ತ, ಮವಿಸಕಂನಿ., ಉಡುಪಿ ರವರ ದಯಾಪರ ಮಾಹಿತಿಗಾಗಿ.
2) ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನಾ ವಿಭಾಗ ಮ.ವಿ.ಸ.ಕಂ.ನಿ ಕುಂದಾಪುರ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
3) ಸಹಾಯಕ ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ ಮ.ವಿ.ಸ.ಕಂ.ನಿ ಕುಂದಾಪುರ ರವರ ಮಾಹಿತಿಗಾಗಿ.
4) ಶಾಖಾಧಿಕಾರಿಗಳು ಕಾರ್ಯ ಮತ್ತು ಪಾಲನಾ ಶಾಖೆ, ಓ & ಎಂ-1/ ಓ & ಎಂ-2/ಗೋಪಾಡಿ ರವರ ದಯಾಪರ ಮಾಹಿತಿಗಾಗಿ ಹಾಗೂ ತಮ್ಮ ಶಾಖಾವ್ಯಾಪ್ತಿಯ ದೂರುಗಳಿಗೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಂಡು ವರದಿ ನೀಡುವುದು.
5) ಕಛೇರಿ ಕಡತ.